ಪೊಲೀಸ್ ನ್ಯೂಸ್ ಪತ್ರಿಕೆಯ ಪ್ರೀತಿಯ ಕೊಡುಗೆ  8ನೇ ವರ್ಷದ ಹಾದಿಯಲ್ಲಿ...

# ಉದ್ಯೋಗ ಸ್ಫೂರ್ತಿ

**UDYOGA SPOORTHI**
Kannada Fortnightly
ಯಶಸ್ಸಿನ ಮೆಟ್ಟಿಲಿಗೊಂದು ದಿಟ್ಟ ಹೆಜ್ಜೆ...
ಪಾಕ್ಷಿಕ ಪತ್ರಿಕೆ

182ನೇ ಸಂಚಿಕೆ

Volume : 8  Issue : 2  BANGALORE  21-1-2017 to 5-2-2017  Pages: 16  ಬೆಲೆ: ₹ 10/-

**ದಿನಾಂಕ 15-1-2017ರಂದು ನಡೆದ ಶಿಕ್ಷಕರ ಅರ್ಹತಾ ಪರೀಕ್ಷೆಯ ಇಲಾಖೆ ಪ್ರಕಟಿಸಿದ ಕನ್ನಡ ಮಾಧ್ಯಮದ**

**ಪ್ರಥಮ ಪತ್ರಿಕೆ-ಕನ್ನಡ, ಇಂಗ್ಲೀಷ್, ಬಾಲವಿಕಾಸ ಮತ್ತು ಪೆಡಗಾಗಿ, ಗಣಿತ ಹಾಗೂ ಪರಿಸರ ವಿಜ್ಞಾನ**

**ದ್ವಿತೀಯ ಪತ್ರಿಕೆ-ಕನ್ನಡ, ಇಂಗ್ಲೀಷ್, ಬಾಲವಿಕಾಸ ಮತ್ತು ಪೆಡಗಾಗಿ ಹಾಗೂ ಸಮಾಜ ವಿಜ್ಞಾನ**

# TET-KEY ANSWERS

## ಇಲಾಖೆ ಪ್ರಕಟಿತ

ಕ. ರಾ. ರ. ಸಾ. ನಿ. K. S. R. T. C.

## ದರ್ಜೆ-2 ಹುದ್ದೆಗಳ ಆಂತರಿಕ ನೇಮಕಾತಿ

## ದರ್ಜೆ-2 ಹುದ್ದೆಗಳ ನೇರ ನೇಮಕಾತಿ

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಗಳು, ಹಾವೇರಿ, ತುಮಕೂರು**

## ಶೀಘ್ರಲಿಪಿಗಾರರು, ಬೆರಳಚ್ಚುಗಾರರು, ಜವಾನರ ಹುದ್ದೆಗಳು

## ವಾಯುವ್ಯ ರೈಲ್ವೆ 388 ಅಪ್ರೆಂಟೀಸ್ ತರಬೇತಿ ಅರ್ಜಿ ಕರೆ

## ಬಾಂದಾ ಕೃಷಿ ವಿಶ್ವವಿದ್ಯಾಲಯ 67 ಪ್ರೊಫೆಸರ್ ಹುದ್ದೆಗಳಿಗೆ ಅರ್ಜಿ ಆಹ್ವಾನ

## ಭಾಭಾ ಅಣು ಸಂಶೋಧನಾ ಕೇಂದ್ರದಲ್ಲಿ ಹುದ್ದೆಗಳು

**ಮುಂದಿನ ಸಂಚಿಕೆಯಲ್ಲಿ ದಿನಾಂಕ: 29-1-2017ರ ಸ್ಪರ್ಧಾತ್ಮಕ ಪರೀಕ್ಷೆ :**
**PDO ಹಾಗೂ ಕಾರ್ಯದರ್ಶಿ ಗ್ರೇಡ್-1ರ KEY ANSWERSಗಳನ್ನು ನಿರೀಕ್ಷಿಸಿ**




# ಗೆದ್ದು ಸೋಲಬಾರದು ಸೋತು ಗೆಲ್ಲಬೇಕು

ನಮ್ಮಲ್ಲಿ ಬಹುತೇಕ ಮಂದಿ ಎಂದೋ ನಡೆದ ಕಹಿ ಘಟನೆ, ಮತ್ತೊಬ್ಬರೊಂದಿಗಿನ ಭಿನ್ನಾಭಿಪ್ರಾಯ, ಸ್ನೇಹಿತರೊಂದಿಗೆ ಆಡಿದ ಜಗಳ ಮತ್ತು ನೋವುಂಡ ಕ್ಷಣಗಳ ಬಗ್ಗೆಯೇ ಚಿಂತಿಸುತ್ತಾ ದಿನ ಕಳೆಯುತ್ತಾರೆ. ನಾವು ಯಾರೊಂದಿಗೆ ಮನಸ್ತಾಪ ಗೊಂಡಿರುತ್ತೇವೆಯೋ ಅವರೇ ಬಂದು ಮಾತಾಡಲಿ ಅಥವಾ ಕ್ಷಮೆ ಕೇಳಲಿ ಎಂದು ನಿರೀಕ್ಷಿಸುತ್ತೇವೆ. ಇಬ್ಬರ ನಡುವಿನ ಸ್ನೇಹದ ಬಳ್ಳಿ ಮತ್ತೆ ಚಿಗುರಲು ಇದೊಂದೇ ಮಾರ್ಗ ಎಂದು ಚಿಂತಿಸುತ್ತೇವೆ.

ನಾನು ಇತ್ತೀಚೆಗೆ ಹಳೆಯ ಸ್ನೇಹಿತೆಯೊಬ್ಬಳನ್ನು ಭೇಟಿ ಮಾಡಿದ್ದೆ. ಆಕೆಯ ಆರೋಗ್ಯ ಸ್ಥಿತಿ ಅಷ್ಟೇನು ಚೆನ್ನಾಗಿರಲಿಲ್ಲ. ಆಕೆ ಮಾತನಾಡುತ್ತಾ ತಾನು ಮಗನೊಂದಿಗೆ, ಕಳೆದ 3 ವರ್ಷಗಳಿಂದ ಮಾತನಾಡಿಲ್ಲವೆಂದು ತಿಳಿಸಿದಳು. ತಕ್ಷಣವೇ ಅದಕ್ಕೆ ಕಾರಣವೇನೆಂದು ಕೇಳಿದೆ? ಮಗನ ಹೆಂಡತಿಯ ವಿಚಾರದಲ್ಲಿ ತಾಯಿ-ಮಗನ ನಡುವೆ ಸಣ್ಣ ಭಿನ್ನಾಭಿಪ್ರಾಯ ಮತ್ತು ಮುನಿಸು. ಅದಕ್ಕಾಗಿ ಇಬ್ಬರೂ ಮಾತನಾಡುವುದನ್ನೇ ನಿಲ್ಲಿಸಿಬಿಟ್ಟಿದ್ದರು. ಅಮ್ಮ ಕರೆ ಮಾಡಿ ಮಾತನಾಡಲಿ ಎಂದು ಮಗ, ನಾನು ಸತ್ತರೂ ಚಿಂತೆಯಿಲ್ಲ ಮಗನೇ ಕ್ಷಮೆ ಕೇಳಲಿ ಎಂದು ತಾಯಿ. ಒಟ್ಟನಲ್ಲಿ ಅವರಿಬ್ಬರ ಮಧ್ಯದಲ್ಲೊಂದು ಕಗ್ಗಂಟು. ವಿಷಯ ತಿಳಿದ ನಾನು ಆಕೆಯೊಂದಿಗೆ ಸಾಕಷ್ಟು ಹೊತ್ತು ಮಾತನಾಡಿ, ಆಕೆಯೇ ಮಗನಿಗೆ ಕರೆ ಮಾಡುವಂತೆ ಒತ್ತಾಯಿಸಿದೆ. ನನ್ನ ಒತ್ತಾಯಕ್ಕೆ ಮಣಿದು ಆಕೆ ಕರೆ ಮಾಡಲು ಸಮ್ಮತಿಸಿದಳು. ಆಶ್ಚರ್ಯವೆಂದರೆ ಆಕೆ ಕರೆಮಾಡುತ್ತಿದ್ದಂತೆಯೇ ಮಗ ಗದ್ಗತಿತನಾಗಿ ಗಳಗಳನೆ ಅಳಲಾರಂಭಿಸಿದ. ಕರೆ ಮಾಡಿದ್ದಕ್ಕೆ ಅಮ್ಮನಿಗೆ ಕೃತಜ್ಞತೆ ಸಲ್ಲಿಸಿದ. ನಡೆದ ಘಟನೆಗಾಗಿ ನೊಂದು ಕ್ಷಮೆ ಕೋರಿದ.

ಈ ಘಟನೆಯ ಸಾರಾಂಶ ಇಷ್ಟೇ. ನಿಮ್ಮ ಮತ್ತು ನಿಮ್ಮನ್ನು ಪ್ರೀತಿಸುವವರ ನಡುವೆ ಏನೇ ಭಿನ್ನಾಭಿಪ್ರಾಯಗಳಿರಲಿ ಅದನ್ನು ಪರಿಹರಿಸಿಕೊಳ್ಳಲು ಮೊದಲು ನೀವೇ ಮುಂದೆ ಬನ್ನಿ. ಗೆಲುವು ಇಬ್ಬರಿಗೂ ಲಭಿಸುತ್ತದೆ. ಇಂತಹ ಸಂದರ್ಭಗಳಲ್ಲಿ ಕೋಪ, ಅಸಮಾಧಾನ, ಅಸಂತೋಷವನ್ನು ಹೆಚ್ಚು ಕಾಲ ಮನಸ್ಸಿನಲ್ಲಿ ಇಟ್ಟುಕೊಂಡಷ್ಟೂ ಸಣ್ಣ ಸಮಸ್ಯೆಗಳು ದೊಡ್ಡದಾಗುತ್ತವೆ. ನಮಗೆ ಸಂತೋಷಕ್ಕಿಂತಲೂ ದ್ವೇಷ ಮತ್ತು ಅಹಂಗಳೇ ಮುಖ್ಯವಾಗುತ್ತದೆ. ಇದು ಖಂಡಿತ ಸರಿಯಲ್ಲ. ನಮ್ಮ ಆನಂದ, ಸಂತೋಷ ಮತ್ತು ತೃಪ್ತಿಗಿಂತ ಮುಖ್ಯವಾದುದು ಬದುಕಿನಲ್ಲಿ ಮತ್ತೇನಿದೆ? ಮತ್ತೊಬ್ಬರಲ್ಲಿ ಕ್ಷಮೆ ಕೇಳಿದರೆ, ಅವರೊಂದಿಗೆ ಅಹಂನ್ನು ಬಿಟ್ಟು ಮಾತನಾಡಿದರೆ ನಮ್ಮ ವ್ಯಕ್ತಿತ್ವಕ್ಕೇನೂ ಕುಂದು ಬಾರದು. ಕಾರಣ ಅವರ ನಿಲುವೂ ಸಹ ಅನೇಕ ಬಾರಿ ಸರಿಯಾಗಿರುತ್ತದೆ. ಅದನ್ನು ಒಪ್ಪಿಕೊಳ್ಳುವ ಔದಾರ್ಯತೆ ನಮಗಿರಬೇಕು. ಆಗ ಇಬ್ಬರಲ್ಲಿಯೂ ಉಲ್ಲಾಸದ ಬುಗ್ಗೆ ಚಿಮ್ಮುತ್ತದೆ. ನಿಮ್ಮಲ್ಲಿರುವ ಈ ರೀತಿಯ ಗುಣಗಳು ಇತರರಿಗೆ ತಿಳಿದಾಗ ಅವರೇ ಬಂದು ನಿಮ್ಮನ್ನು ಸಂತೈಸುತ್ತಾರೆ. ಹಾಗೊಂದು ವೇಳೆ ಅವರು ನಿಮ್ಮ ಬಳಿ ಬರದಿದ್ದರೂ ಚಿಂತೆಯಿಲ್ಲ. ನೀವೇ ಮೊದಲು ಅವರನ್ನು ಸಂಪರ್ಕಿಸಿ. ಅದರಿಂದ ಅಂತರಂಗದಲ್ಲಿ ಶಾಂತಿ ಮತ್ತು ತೃಪ್ತಿ ಮೂಡುತ್ತದೆ. ಅದು ನೆಮ್ಮದಿಯ ಬದುಕಿಗೆ ನಾಂದಿ ಹಾಡುತ್ತದೆ.

ವಿದ್ಯೆ ಹೆಚ್ಚಿದಷ್ಟೂ ವಿನಯವೂ ಹೆಚ್ಚಿದ್ದರೆ ಆ ವಿದ್ಯೆಗೂ ಸಾರ್ಥಕ. ಹೆಚ್ಚು ಕಲಿತರೆ ಹಮ್ಮು ಬಿಮ್ಮುಗಳು ಬಳಿ ಸುಳಿಯದಂತೆ ನೋಡಿಕೊಳ್ಳಬೇಕು. ನಾವೇ ಮುಂದುವರಿದು ಮಾತನಾಡಿದರೆ ನಮ್ಮ ಕಿರೀಟ ಬಿದ್ದುಹೋಗುವುದೇನೋ ಎಂಬಂತೆ ವರ್ತಿಸುತ್ತೇವೆ. ಆದರೆ ಅದು ಮಾನವೀಯ ಗುಣವಾಗುವುದಿಲ್ಲ. ಬಸವಣ್ಣನವರು "ಎನಗಿಂತ ಕಿರಿಯರಿಲ್ಲ" ಎಂಬ ತತ್ವವನ್ನು ಅಳವಡಿಸಿಕೊಂಡಿದ್ದರಿಂದಲೇ ಎಲ್ಲಾ ವರ್ಗದ ಜನರ ಮನವೊಲಿಸಲು ಸಾಧ್ಯವಾಯಿತು. ಸಂಘಟನೆಗೆ ಅವಕಾಶವಾಯಿತು. ತಾನೇ ಮೇಲೆಂಬುದನ್ನು ಬಿಸುಟು, ಜನರ ಮಧ್ಯೆ ಬೆರೆತಿದ್ದರಿಂದಲೇ ಇಂದೂ ಸಹ ಜನಮಾನಸದಲ್ಲಿ ಅವರು ನೆಲೆಯೂರಿದರು.

ಸೋಲುವುದು ತಪ್ಪಲ್ಲ, ಒಂದೇ ಸಲ ಗೆಲ್ಲಲು ಸಾಧ್ಯವಾಗದು. ಸೋಲು ಗೆಲುವಿನ ಮೆಟ್ಟಲು. ಸೋಲುವುದರಿಂದಲೇ ಗೆಲುವು ಸಾಧ್ಯ. ಆದ್ದರಿಂದಲೇ ಹಿರಿಯರು ಮಹತ್ತರವಾದ "ಸೋಲು ಗೆಲುವಿಗಿಂತ ಮೇಲು" ಎಂದು ಹೇಳಿದ್ದಾರೆ.

-ಎಂ. ರಾಹುಲ್
ಸಂಪಾದಕ

**ಪತ್ರಿಕೆಯ ಬಗ್ಗೆ ನಿಮ್ಮ ಅನಿಸಿಕೆ ಅಥವಾ ಪ್ರಶ್ನೆಗಳಿದ್ದರೆ ಬೆಳಿಗ್ಗೆ 10ರಿಂದ ಸಂಜೆ 5ರ ಅವಧಿಯಲ್ಲಿ ಕರೆ ಮಾಡುವುದು.**

**ಫೋನ್: 080-23588510**

**ಮೊಬೈಲ್: 8971302735**

**ಕಚೇರಿಗೆ ಕಳುಹಿಸುವ ಪತ್ರಗಳನ್ನು ನೋಂದಣಿ / ರಿಜಿಸ್ಟರ್ಡ್ ಅಂಚೆ ಮೂಲಕ ಸ್ವೀಕರಿಸಲಾಗುವುದಿಲ್ಲ.**

## ವಿಶೇಷ ಸೂಚನೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹಿರಾತುಗಳು ವಿಶ್ವಾಸಾರ್ಹವಾದರೂ ಅದರಲ್ಲಿನ ವಸ್ತು, ವಿಷಯ ಹಾಗೂ ಮಾಹಿತಿಗಳು ಜಾಹಿರಾತುದಾರರ ಅಭಿಪ್ರಾಯಗಳೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಆದುದರಿಂದ ಓದುಗರು ಜಾಹಿರಾತುದಾರರೊಂದಿಗೆ ಎಚ್ಚರಿಕೆಯಿಂದ ವ್ಯವಹರಿಸತಕ್ಕದ್ದು. ಜಾಹಿರಾತುದಾರರ ಪ್ರಾಮಾಣಿಕತೆಗೆ ಪತ್ರಿಕೆ ಜವಾಬ್ದಾರಿಯಲ್ಲ.





**IBPS-RRB**

ಬ್ಯಾಂಕ್‌ಗಳ ನೇಮಕಾತಿಯ ಪರಿಷ್ಕೃತ ಪಠ್ಯಕ್ರಮದ ಪ್ರಶ್ನೋತ್ತರಗಳ ಪುಸ್ತಕಗಳಿಗಾಗಿ ಸಂಪರ್ಕಿಸಿ. ಫೋನಲ್ಲೂ ಆರ್ಡರ್ ಮಾಡಬಹುದು. **ಮೊ: 9686113611**


## ಅರ್ಜಿಗಳಿಗೆ ಆಹ್ವಾನ

| | ಹುದ್ದೆಯ ಹೆಸರು | ಆಹ್ವಾನಿಸಿದ ಇಲಾಖೆ/ಸಂಸ್ಥೆ | ಅರ್ಜಿ ಹಾಕುವ ಬಗೆ | ವಿವರ ಪುಟ |
|---|---|---|---|---|
| 1. | ದರ್ಜೆ-2 ಹುದ್ದೆಗಳ ಆಂತರಿಕ ನೇಮಕ | ಕೆಪಿಎಸ್‌ಆರ್‌ಟಿಸಿ | ಆನ್‌ಲೈನ್ | 3 |
| 2. | ಶೀಘ್ರಲಿಪಿಗಾರ ಹಾಗೂ ಜವಾನರ ಹುದ್ದೆಗಳು | ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಹಾವೇರಿ | ಅಂಚೆ ಮೂಲಕ | 4 |
| 3. | ಶೀಘ್ರಲಿಪಿಗಾರ ಹಾಗೂ ಬೆರಳಚ್ಚುಗಾರರ ಹುದ್ದೆಗಳು | ಪ್ರಧಾನ ಮತ್ತು ಸತ್ರ ನ್ಯಾಯಾಲಯ, ತುಮಕೂರು | ಅಂಚೆ ಮೂಲಕ | 5 |
| 4. | ಪ್ರೊಫೆಸರ್ ಹುದ್ದೆಗಳು | ಬಾಂದಾ ಕೃಷಿ ವಿಶ್ವವಿದ್ಯಾಲಯ | ಅಂಚೆ ಮೂಲಕ | 6 |
| 5. | ವಿವಿಧ ಹುದ್ದೆಗಳು | ಭಾಭಾ ಅಣು ಸಂಶೋಧನಾ ಕೇಂದ್ರ | ಆನ್‌ಲೈನ್ | 7 |
| 6. | ದರ್ಜೆ-2 ಅಧಿಕಾರಿ ಹುದ್ದೆಗಳು | ಕೆಪಿಎಸ್‌ಆರ್‌ಟಿಸಿ | ಆನ್‌ಲೈನ್ | 8 |
| 7. | ಅಪ್ರೆಂಟಿಸ್ ತರಬೇತಿ | ವಾಯುವ್ಯ ರೈಲ್ವೆ | ಆನ್‌ಲೈನ್ | 10 |
| 8. | ಟಿಇಟಿ ಕೀ ಉತ್ತರಗಳು | - | - | 11 |

## ಹೆಚ್ಚಲಿದೆ ನಿರುದ್ಯೋಗ ಪ್ರಮಾಣ

2017-18ನೇ ಸಾಲಿನಲ್ಲಿ ಭಾರತದಲ್ಲಿ ಉದ್ಯೋಗ ಸೃಷ್ಟಿ ತಟಸ್ಥವಾಗಲಿದ್ದು, ನಿರುದ್ಯೋಗ ಪ್ರಮಾಣ ಏರಿಕೆಯಾಗಲಿದೆ ಎಂದು ವಿಶ್ವ ಕಾರ್ಮಿಕ ಸಂಘಟನೆ (ILO) ಬಿಡುಗಡೆ ಮಾಡಿರುವ 2017ರ 'ವರ್ಲ್ಡ್ ಎಂಪ್ಲಾಯ್‌ಮೆಂಟ್ ಆ್ಯಂಡ್ ಸೋಷಿಯಲ್ ಔಟ್‌ಲುಕ್' ವರದಿಯಲ್ಲಿ ತಿಳಿಸಿದೆ.

ವರದಿಯ ಮುಖ್ಯಾಂಶಗಳು:

- 2017ರಲ್ಲಿ 1 ಲಕ್ಷ ಹಾಗೂ 2018ರಲ್ಲಿ 2 ಲಕ್ಷ ಹೊಸ ನಿರುದ್ಯೋಗಿಗಳು ಸೃಷ್ಟಿಯಾಗಲಿದ್ದಾರೆ.
- ಭಾರತದಲ್ಲಿ 2016ರಲ್ಲಿ ಒಟ್ಟು 1.77 ಕೋಟಿ ನಿರುದ್ಯೋಗಿಗಳಿದ್ದು, 2018ರ ವೇಳೆಗೆ ಈ ಸಂಖ್ಯೆ 1.8 ಕೋಟಿಗೆ ಏರಿಕೆಯಾಗಲಿದೆ. ಆದರೂ 2017ರಲ್ಲಿ ನಿರುದ್ಯೋಗ ಪ್ರಮಾಣ ಶೇ. 3.4ರಷ್ಟಿರಲಿದೆ.
- 2016ರಲ್ಲಿ ಭಾರತ ಉದ್ಯೋಗ ಸೃಷ್ಟಿಯಲ್ಲಿ ಮಹತ್ವದ ಸಾಧನೆ ಮಾಡಿದೆ. ಇದೇ ಸಾಲಿನಲ್ಲಿ ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿ ಒಟ್ಟು 1.34 ಕೋಟಿ ಉದ್ಯೋಗಾವಕಾಶ ಸೃಷ್ಟಿಯಾಗಿದ್ದು, ಈ ಪೈಕಿ ಬಹುಪಾಲು ಉದ್ಯೋಗಗಳು ಭಾರತದಲ್ಲೇ ಸೃಷ್ಟಿಯಾಗಿವೆ. ಈ ಅವಧಿಯಲ್ಲಿ ದಕ್ಷಿಣ ಏಷ್ಯಾದ ಉದ್ಯೋಗ ಬೆಳವಣಿಗೆ ದರ ಶೇ. 6.8ರಷ್ಟಿದ್ದರೆ, ಭಾರತದಲ್ಲಿ ಶೇ. 7.6 ರಷ್ಟಿತ್ತು.
- 2017ರಲ್ಲಿ ವಿಶ್ವಾದ್ಯಂತ ಸುಮಾರು 34 ಲಕ್ಷ ಜನ ಹೊಸ ನಿರುದ್ಯೋಗಿಗಳು ಸೃಷ್ಟಿಯಾಗಲಿದ್ದಾರೆ.

# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ

# ದರ್ಜೆ-2 ಹುದ್ದೆಗಳ ಆಂತರಿಕ ನೇಮಕಾತಿ

ಕರ್ನಾಟಕ ರಾಜ್ಯದ ರಸ್ತೆ ಸಾರಿಗೆ ಸಂಸ್ಥೆಗೆ ಅವಶ್ಯವಿರುವ ಈ ಕೆಳಕಂಡ "ದರ್ಜೆ-II ರ ಅಧಿಕಾರಿ" ಹುದ್ದೆಗಳನ್ನು, ಸಂಸ್ಥೆಯ (ಪದವೃಂದ ಮತ್ತು ನೇಮಕ) ನಿಯಮಾವಳಿ 1982 ಮತ್ತು ತದನಂತರದ ತಿದ್ದುಪಡಿಗಳ (ದರ್ಜೆ-2 ಅಧಿಕಾರಿ ಹುದ್ದೆಗಳ ಆಂತರಿಕ ನೇಮಕಾತಿ ಯೋಜನೆ, 1997) ರ ಅನುಸಾರ ಆಂತರಿಕ ನೇಮಕಾತಿ ಮೂಲಕ ತುಂಬಲು ರಾಜ್ಯ ರಸ್ತೆ ಸಾರಿಗೆ ನಿಗಮಗಳ ಅರ್ಹ ನೌಕರರಿಂದ ಆನ್‌ಲೈನ್ (ON LINE) ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹುದ್ದೆಗಳು ಮತ್ತು ಅವುಗಳ ಮೀಸಲಾತಿ ವಿವರ ಈ ಕೆಳಕಾಣಿಸಿದಂತಿರುತ್ತದೆ.

### ಸಹಾಯಕ ಲೆಕ್ಕಾಧಿಕಾರಿ

| ಮೀಸಲಾತಿ | ಪ. ಜಾ. | ಪ. ಪಂ. | ವರ್ಗ -1 | 2ಎ | 2ಬಿ | 3ಎ | 3ಬಿ | ಸಾ. ಅ. | ಒಟ್ಟು |
|---|---|---|---|---|---|---|---|---|---|
| ಮಹಿಳೆ | 0 | 0 | 0 | 0 | 0 | 0 | 0 | 1 | 1 |

### ಸಹಾಯಕ ಸಂಚಾರ ವ್ಯವಸ್ಥಾಪಕರು

| ಮೀಸಲಾತಿ | ಪ. ಜಾ. | ಪ. ಪಂ. | ವರ್ಗ -1 | 2ಎ | 2ಬಿ | 3ಎ | 3ಬಿ | ಸಾ. ಅ. | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 0 | 0 | 0 | 0 | 0 | 0 | 0 | 1 | 1 |
| ಮಹಿಳೆ | 0 | 0 | 0 | 0 | 1 | 0 | 0 | 1 | 2 |
| ಗ್ರಾಮೀಣ | 1 | 0 | 0 | 1 | 0 | 0 | 0 | 1 | 3 |
| ಒಟ್ಟು | 1 | 0 | 0 | 1 | 1 | 0 | 0 | 3 | 6 |

### ಸಹಾಯಕ ತಾಂತ್ರಿಕ ಅಭಿಯಂತರರು

| ಮೀಸಲಾತಿ | ಪ. ಜಾ. | ಪ. ಪಂ. | ವರ್ಗ -1 | 2ಎ | 2ಬಿ | 3ಎ | 3ಬಿ | ಸಾ. ಅ. | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 1 | 0 | 0 | 1 | 0 | 0 | 0 | 0 | 2 |
| ಮಹಿಳೆ | 0 | 0 | 0 | 0 | 0 | 0 | 0 | 1 | 1 |
| ಒಟ್ಟು | 1 | 0 | 0 | 1 | 0 | 0 | 0 | 1 | 3 |

### ಸಹಾಯಕ ಉಗ್ರಾಣಾಧಿಕಾರಿ

| ಮೀಸಲಾತಿ | ಪ. ಜಾ. | ಪ. ಪಂ. | ವರ್ಗ -1 | 2ಎ | 2ಬಿ | 3ಎ | 3ಬಿ | ಸಾ. ಅ. | ಒಟ್ಟು |
|---|---|---|---|---|---|---|---|---|---|
| ಗ್ರಾಮೀಣ | 0 | 0 | 0 | 0 | 0 | 0 | 0 | 1 | 1 |

### ಭದ್ರತಾ ಮತ್ತು ಜಾಗ್ರತಾಧಿಕಾರಿ

| ಮೀಸಲಾತಿ | ಪ. ಜಾ. | ಪ. ಪಂ. | ವರ್ಗ -1 | 2ಎ | 2ಬಿ | 3ಎ | 3ಬಿ | ಸಾ. ಅ. | ಒಟ್ಟು |
|---|---|---|---|---|---|---|---|---|---|
| ಗ್ರಾಮೀಣ | 0 | 0 | 0 | 0 | 0 | 0 | 0 | 1 | 1 |

### ಸಹಾಯಕ ಕಾನೂನು ಅಧಿಕಾರಿ (GIG ಹಿಂಬಾಕಿ-ಒಂದು ಹುದ್ದೆ)

| ಮೀಸಲಾತಿ | ಪ. ಜಾ. | ಪ. ಪಂ. | ವರ್ಗ -1 | 2ಎ | 2ಬಿ | 3ಎ | 3ಬಿ | ಸಾ. ಅ. | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 0 | 0 | 1 | 0 | 0 | 0 | 0 | 0 | 1 |

ಸದರಿ ಜಾಹೀರಾತಿನಲ್ಲಿ ನಮೂದಿಸಿರುವ ಹುದ್ದೆಗಳ ಸಂಖ್ಯೆಯನ್ನು ನಿಗದಿಪಡಿಸುವಾಗ ಪ್ರಸ್ತುತ ಕ.ರಾ.ರ.ಸಾ.ನಿಗಮ ಮತ್ತು ವಾ.ಕ.ರ.ಸಾ.ಸಂಸ್ಥೆಗಳಲ್ಲಿ ಖಾಲಿ ಇರುವ 2017-18ನೇ ಸಾಲಿನಲ್ಲಿ ಉದ್ಭವವಾಗುವ ಹುದ್ದೆಗಳನ್ನು ಸಹ ಪರಿಗಣಿಸಲಾಗಿದೆ.

*ಟಿಪ್ಪಣಿ: 1. ಆಯಾ ವರ್ಗದ ಸಮತಳ ಮೀಸಲಾತಿಯ ರಿಕ್ತ ಸ್ಥಾನಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಆಯಾ ವರ್ಗಕ್ಕೆ ಸೇರಿದ ಸಾಮಾನ್ಯ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.*

■ **ಅರ್ಹತೆಗಳು :** (ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ 31.01.2017ರಂದಿಗೆ)

1. ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ ಸಂಸ್ಥೆಯಲ್ಲಿ ಐದು ವರ್ಷಗಳ ಕನಿಷ್ಠ ಸೇವೆಯನ್ನು (ಪರೀಕ್ಷಾರ್ಥ ಅವಧಿಯನ್ನೊಳಗೊಂಡು) ಪೂರ್ಣಗೊಳಿಸಿರುವ ನಿಗಮಗಳ ನೌಕರರು ಮಾತ್ರ ಈ ಜಾಹೀರಾತಿನಡಿ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ. ಅವರು 45 ವರ್ಷಗಳ ವಯಸ್ಸಿನೊಳಗಿರಬೇಕು. (Should be below 45 years of age).
2. ಹುದ್ದೆಗಳಿಗೆ ನಿಗದಿಪಡಿಸಿರುವ ವಿದ್ಯಾರ್ಹತೆಯಲ್ಲಿ ಸರಾಸರಿ ಕನಿಷ್ಠ 45% ಅಂಕಗಳನ್ನು ಪಡೆದಿರಬೇಕು. ಸರಾಸರಿ ಅಂಕಗಳು ಅಂದರೆ ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆಯಲ್ಲಿ ಭಾಷೆಗಳನ್ನು ಒಳಗೊಂಡಂತೆ ಎಲ್ಲಾ ವರ್ಷಗಳಲ್ಲಿ / ಸೆಮಿಸ್ಟರ್‌ಗಳಲ್ಲಿ ಪಡೆದ ಅಂಕಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದು.
3. ಜಾಹೀರಾತಿನಲ್ಲಿ ಆಯಾ ಹುದ್ದೆಗೆ ನಿಗಧಿಪಡಿಸಿರುವ ವಿದ್ಯಾರ್ಹತೆಯಲ್ಲಿ ಪಡೆದ ಅಂಕಗಳನ್ನು ಮಾತ್ರ ಪರಿಗಣಿಸುವುದಿದ್ದು, ಉನ್ನತ ವಿದ್ಯಾಭ್ಯಾಸದಲ್ಲಿ ಪಡೆದ ಅಂಕಗಳನ್ನು ಪರಿಗಣಿಸಲಾಗುವುದಿಲ್ಲ.
4. ಮಾಜಿ ಸೈನಿಕ ಅಭ್ಯರ್ಥಿಯು ಭಾರತದ ಸಶಸ್ತ್ರ ಪಡೆಯಲ್ಲಿ ಸೇವೆ ಸಲ್ಲಿಸಿ, ಮಾಜಿ ಸೈನಿಕ ಎಂಬುದಕ್ಕೆ ಅರ್ಹ ಪ್ರಮಾಣಪತ್ರವನ್ನು ಹೊಂದಿದ್ದರೆ, ಅವರು ಸಲ್ಲಿಸಿದ ಸೇವಾವಧಿಯ ಜೊತೆಗೆ ಮೂರು ವರ್ಷಗಳ ವಯೋಮಿತಿಯ ರಿಯಾಯಿತಿಗೆ ಅರ್ಹರಿರುತ್ತಾರೆ. ಆದರೆ ಅವರ ವಯಸ್ಸು 45 ವರ್ಷ ಮೀರಿರಬಾರದು.

■ **ವಿದ್ಯಾರ್ಹತೆ:**

1. **ಸಹಾಯಕ ಲೆಕ್ಕಾಧಿಕಾರಿ:**
   **ವಿದ್ಯಾರ್ಹತೆ :** ಕಾನೂನು ಮೇರೆಗೆ ಸ್ಥಾಪಿತವಾದ ವಿಶ್ವವಿದ್ಯಾಲಯವೊಂದರಿಂದ ಕಾಮರ್ಸ್/ಫೈನಾನ್ಸ್ ಅಥವಾ ಬ್ಯಾಚುಲರ್ ಆಫ್ ಬ್ಯುಸಿನೆಸ್ ಮ್ಯಾನೇಜ್‌ಮೆಂಟ್ ಪದವಿ (3 ವರ್ಷ ಕೋರ್ಸ್)
2. **ಸಹಾಯಕ ಸಂಚಾರ ವ್ಯವಸ್ಥಾಪಕರು:**
   **ವಿದ್ಯಾರ್ಹತೆ :** (ಅ) ಕಾನೂನು ಮೇರೆಗೆ ಸ್ಥಾಪಿತವಾದ ವಿಶ್ವವಿದ್ಯಾಲಯವೊಂದರಿಂದ ಪಡೆದ ಬ್ಯಾಚುಲರ್ ಪದವಿ (3 ವರ್ಷ ಕೋರ್ಸ್) ಮತ್ತು (ಆ) ಭಾರಿ ಸಾಗಾಣಿಕೆ ವಾಹನ ಚಾಲನಾ ಪರವಾನಗಿ ಹೊಂದಿರಬೇಕು ಅಥವಾ ಪರೀಕ್ಷಾರ್ಥ ಅವಧಿ ಮುಗಿಯುವ ಒಳಗೆ ಪಡೆಯತಕ್ಕದ್ದು. ತಪ್ಪಿದ್ದಲ್ಲಿ ನೇಮಕಾತಿಯು ರದ್ದಾಗುವುದು.
3. **ಸಹಾಯಕ ತಾಂತ್ರಿಕ ಅಭಿಯಂತರರು:**
   **ವಿದ್ಯಾರ್ಹತೆ :** (ಅ) ಕಾನೂನು ಮೇರೆಗೆ ಸ್ಥಾಪಿತವಾದ ವಿಶ್ವವಿದ್ಯಾಲಯವೊಂದರಿಂದ ಮೆಕ್ಯಾನಿಕಲ್ / ಆಟೋಮೊಬೈಲ್/ ಇಂಜಿನಿಯರಿಂಗ್‌ನಲ್ಲಿ ಪಡೆದ ಬ್ಯಾಚುಲರ್ ಪದವಿ ಮತ್ತು
   (ಆ) ಚಾಲ್ತಿಯಲ್ಲಿರುವ ಭಾರೀ ವಾಹನ ಚಾಲನಾ ಪರವಾನಗಿ ಹೊಂದಿರಬೇಕು ಅಥವಾ ಪರೀಕ್ಷಾರ್ಥ ಅವಧಿ ಮುಗಿಯುವ ಒಳಗೆ ಹೊಂದತಕ್ಕದ್ದು.
4. **ಸಹಾಯಕ ಉಗ್ರಾಣಾಧಿಕಾರಿ :**
   **ವಿದ್ಯಾರ್ಹತೆ :** (ಅ) ಕಾನೂನು ಮೇರೆಗೆ ಸ್ಥಾಪಿತವಾದ ವಿಶ್ವವಿದ್ಯಾಲಯವೊಂದರಿಂದ ಪಡೆದ ಬ್ಯಾಚುಲರ್ ಪದವಿ (3 ವರ್ಷ ಕೋರ್ಸ್)
5. **ಭದ್ರತಾ ಮತ್ತು ಜಾಗ್ರತಾಧಿಕಾರಿ:**
   **ವಿದ್ಯಾರ್ಹತೆ :** ಕಾನೂನು ಮೇರೆಗೆ ಸ್ಥಾಪಿತವಾದ ವಿಶ್ವವಿದ್ಯಾಲಯವೊಂದರಿಂದ ಪಡೆದ ಬ್ಯಾಚುಲರ್ ಪದವಿ (3 ವರ್ಷ ಕೋರ್ಸ್) ಅಥವಾ ಕ್ಯಾಪ್ಟನ್ ದರ್ಜೆಗಿಂತ ಕಡಿಮೆ ಇಲ್ಲದಂತಹ ಮಾಜಿ ಸೈನಿಕ ಅಥವಾ ನೌಕಾಪಡೆ/ಭೂಸೇನೆ ಅಥವಾ ವಾಯುಪಡೆಯಲ್ಲಿ ತತ್ಸಮಾನ ದರ್ಜೆಯವರಾಗಿರಬೇಕು.
6. **ಸಹಾಯಕ ಕಾನೂನು ಅಧಿಕಾರಿ:**
   **ವಿದ್ಯಾರ್ಹತೆ :** ಅ) ಕಾನೂನು ಮೇರೆಗೆ ಸ್ಥಾಪಿತವಾದ ವಿಶ್ವವಿದ್ಯಾಲಯವೊಂದರಿಂದ ಪಡೆದ ಕಾನೂನು ಪದವಿ.

■ **ವಯೋಮಿತಿ:**

ಅರ್ಜಿಗಳನ್ನು ಸ್ವೀಕರಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ: 31-01-2017 ರಂದಿಗೆ, ಕನಿಷ್ಠ 18 ವರ್ಷಗಳು ಪೂರ್ಣಗೊಂಡಿರಬೇಕು. ಅವರು 45 ವರ್ಷ ವಯಸ್ಸಿನೊಳಗಿರಬೇಕು. (Should be below 45 years of age).

■ **ದೇಹದಾರ್ಢ್ಯತೆ:**

ಸಹಾಯಕ ಸಂಚಾರ ವ್ಯವಸ್ಥಾಪಕ ಹಾಗೂ ಭದ್ರತಾ ಮತ್ತು ಜಾಗ್ರತಾಧಿಕಾರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಯಸುವ ಅಭ್ಯರ್ಥಿಗಳು ಈ ಕೆಳಕಂಡ ಕನಿಷ್ಠ ದೇಹದಾರ್ಢ್ಯತೆಯನ್ನು ಕಡ್ಡಾಯವಾಗಿ ಹೊಂದಿರಬೇಕು.

| | ಪುರುಷರು | ಮಹಿಳೆಯರು |
|---|---|---|
| ಎತ್ತರ | 163 ಸೆಂ.ಮೀ. | 153 ಸೆಂ.ಮೀ. |
| ತೂಕ | 55 ಕೆ.ಜಿ. | 50 ಕೆ.ಜಿ. |

■ **ನಿಗಧಿತ ಶುಲ್ಕ:**

1. **ಶುಲ್ಕದ ವಿವರ:**

| ವರ್ಗ | ಶುಲ್ಕ (ಪ್ರತಿ ಹುದ್ದೆಗೆ) |
|---|---|
| ಸಾಮಾನ್ಯ, 2ಎ, 2ಬಿ, 3ಎ ಮತ್ತು 3 ಬಿ ವರ್ಗ | ರೂ. 800/- |
| ಪ.ಜಾತಿ, ಪ.ಪಂಗಡ, ವರ್ಗ-1, ಮಾಜಿ ಸೈನಿಕ ಮತ್ತು ಅಶಕ್ತ ಮಾಜಿ ಸೈನಿಕರ ಅವಲಂಬಿತರಿಗೆ | ರೂ. 400/- |

***ವಿಶೇಷ ಸೂಚನೆ:*** *ಒಂದಕ್ಕಿಂತ ಹೆಚ್ಚು ಹುದ್ದೆಗೆ ಅರ್ಜಿ ಸಲ್ಲಿಸಬಯಸುವ ಅಭ್ಯರ್ಥಿಗಳು ಪ್ರತಿ ಹುದ್ದೆಗೆ ಮೇಲ್ಕಾಣಿಸಿದಂತೆ ನಿಗದಿಪಡಿಸಿರುವ ಮೊತ್ತವನ್ನು ಒಗ್ಗೂಡಿಸಿ ಎಲ್ಲಾ ಹುದ್ದೆಗಳಿಗೂ ಸೇರಿದಂತೆ ಒಟ್ಟು ಹಣದ ಮೊತ್ತವನ್ನು ಒಂದೇ ಚಲನ್‌ನಲ್ಲಿ ಪಾವತಿ ಮಾಡಬೇಕು (ಉದಾಹರಣೆಗೆ: ಒಬ್ಬ ಸಾಮಾನ್ಯ ವರ್ಗದ ಅಭ್ಯರ್ಥಿ ಒಂದೇ ಅರ್ಜಿಯಲ್ಲಿ ಮೂರು ಹುದ್ದೆಗಳನ್ನು ಆಯ್ಕೆಮಾಡಿ ಅರ್ಜಿ ಸಲ್ಲಿಸಲು ಇಚ್ಛಿಸಿದಲ್ಲಿ ಪ್ರತಿ ಹುದ್ದೆಗೆ ಪ್ರತ್ಯೇಕ ಅರ್ಜಿ ಶುಲ್ಕವನ್ನು ಒಗ್ಗೂಡಿಸಿ ರೂ. 2400/-ಗಳ ಮೊತ್ತವನ್ನು ಚಲನ್‌ನಲ್ಲಿ ಪಾವತಿಸತಕ್ಕದ್ದು.)*

2. **ಶುಲ್ಕ ಪಾವತಿ ಮಾಡುವ ವಿಧಾನ:**
   www.ksrtcjobs.com ನಲ್ಲಿ ON LINE ಮೂಲಕ ಅರ್ಜಿ ಸಲ್ಲಿಸಿದ ಕೂಡಲೇ ಅಭ್ಯರ್ಥಿಯು ಚಲನ್ ಪ್ರತಿಯನ್ನು ಡೌನ್-ಲೋಡ್ ಮಾಡಿಕೊಂಡು ಅರ್ಜಿ ಶುಲ್ಕವನ್ನು ಅಂಚೆ ಕಛೇರಿಯ ಕೆಲಸದ ವೇಳೆಯೊಳಗೆ ಯಾವುದೇ ಎಲೆಕ್ಟ್ರಾನಿಕ್ ಅಂಚೆ ಕಚೇರಿಗಳಲ್ಲಿ (Comuterised Post Offices Only) ಮಾತ್ರ e-Payment ಮೂಲಕ ಪಾವತಿಸಲು ಈಗಾಗಲೇ ಅವಕಾಶ ಕಲ್ಪಿಸಿದ್ದು, ಈ ಸೌಲಭ್ಯದ ಜೊತೆಗೆ Credit Card/Debit Card/Net Banking ಮೂಲಕವೂ ಸಹ ಸಂದಾಯ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಅರ್ಜಿ ಶುಲ್ಕವನ್ನು ಪಾವತಿಸದೇ ಇರುವ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಬೇರೆ ಯಾವುದೇ ರೀತಿ ಶುಲ್ಕ ಪಾವತಿಸಿದ್ದಲ್ಲಿ ಸದರಿ ಅರ್ಜಿಯನ್ನು ಪರಿಗಣಿಸುವುದಿಲ್ಲ.
3. ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ ಅಥವಾ ಅದನ್ನು ನಡೆಸುವ ಇತರೆ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ. ಶುಲ್ಕವನ್ನು ಸಂದಾಯ ಮಾಡದಿದ್ದಲ್ಲಿ ಅವರ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

■ **ಅರ್ಜಿಯನ್ನು ಸಲ್ಲಿಸುವ ವಿಧಾನ ಮತ್ತು ಕೊನೆಯ ದಿನಾಂಕ:**

ಅ. ಅರ್ಜಿಯನ್ನು ಕಡ್ಡಾಯವಾಗಿ ಆನ್‌ಲೈನ್ ಮುಖಾಂತರವೇ ಕ .ರಾ. ರ .ಸಾ. ನಿಗಮದ ವೆಬ್‌ಸೈಟ್ www.ksrtcjobs.com ಮೂಲಕ ಸಲ್ಲಿಸಬೇಕು.

ಆ. ದಿನಾಂಕ 17.01.2017 ರಿಂದ 31.01.2017 ರವರೆಗೆ ವೆಬ್‌ಸೈಟ್ ತೆರೆದಿರುತ್ತದೆ. ಅರ್ಜಿಗಳನ್ನು ಕೊನೆಯ ದಿನಾಂಕವಾದ 31.01.2017ರ ರಾತ್ರಿ 11:59 ಗಂಟೆಯೊಳಗೆ ಆನ್‌ಲೈನ್‌ನಲ್ಲಿ ಸಲ್ಲಿಸಬಹುದಾಗಿರುತ್ತದೆ.

ಇ. ಅರ್ಜಿ ಶುಲ್ಕ ಪಾವತಿಸಲು ಕೊನೆಯ ದಿನಾಂಕ 02.02.2017ರ ಸಂಜೆ 6.00 ಗಂಟೆಯೊಳಗೆ.

ಈ. ಮೇಲ್ಕಂಡ ನಿಗದಿತ/ಕೊನೆಯ ದಿನಾಂಕ ಮತ್ತು ಸಮಯದ ನಂತರ ಬರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಉ. ಒಂದಕ್ಕಿಂತ ಹೆಚ್ಚು ಹುದ್ದೆಗೆ ಅರ್ಹರಿದ್ದು, ಅರ್ಜಿ ಸಲ್ಲಿಸಬಯಸುವ ಅಭ್ಯರ್ಥಿಗಳು ಒಂದೇ ಅರ್ಜಿಯಲ್ಲಿ ಹುದ್ದೆಗಳನ್ನು ನಮೂದಿಸಿ ಅದಕ್ಕೆ ತಕ್ಕಂತೆ ಅರ್ಜಿ ಶುಲ್ಕ ಪಾವತಿಸಬೇಕು.

☞ 10

**ನೇವಿಯಲ್ಲಿ ನೇರ ನೇಮಕಾತಿ**

ಮರ್ಚೆಂಟ್‌ನ ನೇವಿಯಲ್ಲಿ ಸೀಮ್ಯಾನ್, ಟೆಕ್ನಿಕಲ್ ಆಫೀಸರ್ ಮತ್ತು ನಾವಿಕರು ಹಾಗೂ ವಿವಿಧ ಹುದ್ದೆಗಳಿಗೆ ನೇರ ನೇಮಕಾತಿ

*ಸ್ಥಳ: ಮಂಗಳೂರು, ಕಾರವಾರ, ಗೋವಾ, ಮುಂಬಯಿ, ಕೋಲ್ಕತ್ತಾ, ಚೆನ್ನೈ, ಗುಜರಾತ್ ಹಾಗೂ ವಿದೇಶಗಳಲ್ಲಿ.*

ವಯಸ್ಸು: 17 ರಿಂದ 28 ವರ್ಷ.

ವಿದ್ಯಾರ್ಹತೆ: SSLC/PUC, ITI, Degree, Diplomo Pass / Fail.

ಅಭ್ಯರ್ಥಿಗಳು ತಮ್ಮ Marks Card & Photo, Bio-data ದೊಂದಿಗೆ ಈ ಕೆಳಕಂಡ E-mail ಐಡಿಗೆ ಕಳುಹಿಸುವುದು ಹಾಗೂ ಕಡ್ಡಾಯವಾಗಿ ತಮ್ಮ ಮೊಬೈಲ್ ನಂಬರನ್ನು ನಮೂದಿಸುವುದು. ವಿದ್ಯಾರ್ಹತೆಗೆ ತಕ್ಕಂತೆ ಪೋಸ್ಟಿಂಗ್ ಇರುತ್ತದೆ.

ಸಂಬಳ: ರೂ. 25,000/- ದಿಂದ ರೂ. 50,000/- ವರೆಗೆ.

M: 07249593790

E-mail: chougulenavyjobservice@gmail.com

(ಜಾಹೀರಾತು)

## ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಹಾವೇರಿ

# ಶೀಘ್ರಲಿಪಿಗಾರ ಹಾಗೂ ಜವಾನರ ಹುದ್ದೆಗಳು

ಹಾವೇರಿ ಜಿಲ್ಲೆಯ ಅಧೀನ ನ್ಯಾಯಾಲಯಗಳಲ್ಲಿ ಖಾಲಿ ಇರುವ ಜವಾನ ಮತ್ತು ಶೀಘ್ರಲಿಪಿಗಾರರ ಹುದ್ದೆಗಳಿಎ ನಿಗದಿತ ನಮೂನೆಯಲ್ಲಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದು, ಇಚ್ಛೆಯುಳ್ಳ ಅಭ್ಯರ್ಥಿಗಳು ಅರ್ಜಿ ನಮೂನೆಯ ಎಲ್ಲಾ ಅಂಕಣಗಳನ್ನು ಭರ್ತಿ ಮಾಡಿ ಅರ್ಜಿಯ ಜೊತೆಗೆ ದಾಖಲಾತಿಗಳ ಸ್ವಯಂ ದೃಢೀಕೃತ ನಕಲುಗಳನ್ನು ಲಗತ್ತಿಸಿ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಹಾವೇರಿ, ಈ ವಿಳಾಸಕ್ಕೆ ನಿಗದಿತ ಅವಧಿಯೊಳಗಾಗಿ ಸಲ್ಲಿಸತಕ್ಕದ್ದು.

### ಹುದ್ದೆಯ ಹೆಸರು : ಜವಾನ (ಹುದ್ದೆಗಳ ಸಂಖ್ಯೆ : 19)

| ಮೀಸಲಾತಿ | ಮಹಿಳೆ | ಗ್ರಾಮೀಣ | ಮಾಜಿ ಸೈನಿಕ | ಇತರೆ | ಅಂಗ ವಿಕಲ | ಒಟ್ಟು |
|---|---|---|---|---|---|---|
| ಸಾಮಾನ್ಯ ಅಭ್ಯರ್ಥಿ | 2 | 3 | 1 | 2 | 1 | 9 |
| ಪರಿಶಿಷ್ಟ ಜಾತಿ | 1 | 1 | - | 1 | - | 3 |
| ಪರಿಶಿಷ್ಟ ಪಂಗಡ | - | - | - | 1 | - | 1 |
| ಪ್ರವರ್ಗ-1 | - | - | - | 1 | - | 1 |
| ಪ್ರವರ್ಗ-2ಎ | 2 | - | - | 1 | - | 3 |
| ಪ್ರವರ್ಗ-2ಬಿ | - | - | - | 1 | - | 1 |
| ಪ್ರವರ್ಗ-3ಬಿ | 1 | - | - | - | - | 1 |
| ಒಟ್ಟು | 6 | 4 | 1 | 7 | 1 | 19 |

- **ವೇತನ ಶ್ರೇಣಿ:**
  9600-200-12000-250-13000-300-14200-350-14550/- ಮತ್ತು ಇತರೆ ಭತ್ಯೆಗಳು
- **ವಿದ್ಯಾರ್ಹತೆ:**
  ಕನ್ನಡ ಮಾಧ್ಯಮದಲ್ಲಿ 7ನೇ ತರಗತಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಅರ್ಜಿಯ ಜೊತೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೇಲು ರುಜು ಇರುವ ಅಂಕಪಟ್ಟಿಯ ನೆರಳಚ್ಚು ಪ್ರತಿಯನ್ನು ಕಡ್ಡಾಯವಾಗಿ ಲಗತ್ತಿಸಗಬೇಕು. ಕೈ ಬರಹದ ಅಂಕಪಟ್ಟಿಗಳನ್ನು ಪರಿಗಣಿಸಲಾಗುವುದಿಲ್ಲ. ಅಂಕಪಟ್ಟಿಗಳು ಕಡ್ಡಾಯವಾಗಿ ಮುದ್ರಿತ ಪ್ರತಿಗಳಾಗಿರಬೇಕು.
- **ಆಯ್ಕೆ ವಿಧಾನ:**
  7ನೇ ತರಗತಿಯಲ್ಲಿ ಪಡೆದ ಗರಿಷ್ಠ ಅಂಕಗಳ ಅರ್ಹತೆಯ ಆಧಾರದ ಮೇಲೆ 01 ಹುದ್ದೆಗೆ 10 ಅಭ್ಯರ್ಥಿಗಳಂತೆ ಅತಿ ಹೆಚ್ಚು ಅಂಕ ಪಡೆದ ಅಭ್ಯರ್ಥಿಗಳನ್ನು ಪ್ರಕಟಿಸಿದ ಹುದ್ದೆಗಳಿಗೆ ಅನುಗುಣವಾಗಿ ಸಂದರ್ಶನಕ್ಕೆ ಕರೆಯಲಾಗುವುದು. ಸಂದರ್ಶನದಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.

**ಟಿಪ್ಪಣಿ:** ಸಂದರ್ಶನವು 10 ಅಂಕಗಳನ್ನೊಳಗೊಂಡಿರುತ್ತದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳಲ್ಲಿ, ಮಹಿಳಾ ಅಭ್ಯರ್ಥಿಗಳು, ಮಾಜಿ ಸೈನಿಕ ಅಭ್ಯರ್ಥಿಗಳು, ಯೋಜನಾ ನಿರಾಶ್ರಿತ ಅಭ್ಯರ್ಥಿಗಳು, ಗ್ರಾಮೀನ ಅಭ್ಯರ್ಥಿಗಳು ಹಾಗೂ ಕನ್ನಡ ಮಾಧ್ಯಮ ಅಭ್ಯರ್ಥಿಗಳು ಮೀಸಲಾತಿಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಿರದೇ ಇದ್ದ ಪಕ್ಷದಲ್ಲಿ ಆ ಹುದ್ದೆಗಳನ್ನು ಆಯಾ ಪಂಗಡಗಳ ಇತರೆ ಅಭ್ಯರ್ಥಿಗಳೂ ಸಹ ಲಭ್ಯವಾಗದಿದ್ದಲ್ಲಿ, ಪರಿಶಿಷಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳಿಗೆ ಆಯಾ ಪ್ರವರ್ಗಗಳ ಅರ್ಹ ಅಭ್ಯರ್ಥಿಗಳ ಲಭ್ಯತೆಯ ಕೊರತೆಯಿಂದಾಗಿ ಭರ್ತಿ ಮಾಡಲಾಗದ ರಿಕ್ತ ಸ್ಥಾನಗಳನ್ನು ಬ್ಯಾಕ್‌ಲಾಗ್ ಎಂದು ಪರಿಗಣಿಸಿ ಮುಂದಕ್ಕೆ ಕೊಂಡೊಯ್ಯಲಾಗುವುದು. ಸಂದರ್ಶನಕ್ಕೆ ಆಯ್ಕೆಯಾಗುವ ಎಲ್ಲಾ ಅಭ್ಯರ್ಥಿಗಳು ಸಂದರ್ಶನಕ್ಕೆ ಕರೆದಾಗ ಹಾವೇರಿಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕಚೇರಿಗೆ ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು.

### ಹುದ್ದೆಯ ಹೆಸರು :ಶೀಘ್ರಲಿಪಿಗಾರ (ಹುದ್ದೆಗಳ ಸಂಖ್ಯೆ : 09)

| ವರ್ಗೀಕರಣ | ಇತರೆ | ಮಹಿಳೆ | ಗ್ರಾಮೀಣ | ಮಾ.ಸೈ. | ಒಟ್ಟು |
|---|---|---|---|---|---|
| ಸಾಮಾನ್ಯ ಅಭ್ಯರ್ಥಿ | 1 | 2 | 1 | 1 | 5 |
| ಪರಿಶಿಷ್ಟ ಜಾತಿ | 1 | - | - | - | 1 |
| ಪರಿಶಿಷ್ಟ ಪಂಗಡ | 1 | - | - | - | 1 |
| ಪ್ರವರ್ಗ-2ಎ | - | 1 | - | - | 1 |
| ಪ್ರವರ್ಗ-3ಬಿ | - | 1 | - | - | 1 |
| ಒಟ್ಟು | 3 | 4 | 1 | 1 | 9 |

- **ವೇತನ ಶ್ರೇಣಿ:**
  14550-350-15600-400-17200-19000-500-21000-600-24600-700-26700/-
- **ವಿದ್ಯಾರ್ಹತೆ:**

(1) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ.

(2) ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುವ ಹಿರಿಯ ದರ್ಜೆಯ ಕನ್ನಡ ಮತ್ತು ಆಂಗ್ಲ ಶೀಘ್ರಲಿಪಿ ಮತ್ತು ಬೆರಳಚ್ಚು ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ.

(3) ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುವ ಹಿರಿಯ ಕನ್ನಡ ಮತ್ತು ಆಂಗ್ಲ ಭಾಷೆಗಳ ಶೀಘ್ರಲಿಪಿ ಮತ್ತು ಬೆರಳಚ್ಚು ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ ಅಥವಾ ಡಿಪ್ಲೋಮಾ ಇನ್ ಕಮರ್ಷಿಯಲ್ ಪ್ರಾಕ್ಟೀಸ್‌ನಲ್ಲಿ ಕನ್ನಡ ಮತ್ತು ಆಂಗ್ಲ ಭಾಷೆಗಳ ಹಿರಿಯ ದರ್ಜೆ ಶೀಘ್ರಲಿಪಿ ಮತ್ತು ಬೆರಳಚ್ಚು ಪರೀಕ್ಷೆ ತೇರ್ಗಡೆ ಹೊಂದಿರಬೇಕು.

- **ಆಯ್ಕೆ ವಿಧಾನ:**
  ಶೀಘ್ರಲಿಪಿಗಾರ ಹುದ್ದೆಗೆ ಒಂದು ನಿಮಿಷಕ್ಕೆ 120 ಶಬ್ದಗಳಂತೆ 5 ನಿಮಿಷಗಳ ಉಕ್ತ ಲೇಖನವನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ನೀಡಲಾಗುವುದು. ಅದನ್ನು ಲಿಪ್ಯಂತರಗೊಳಿಸಿ, ಬೆರಳಚ್ಚು ಮಾಡಲ 45 ನಿಮಿಷಗಳ ಕಾಲಾವಕಾಶ ನೀಡಲಾಗುವುದು. ಇದಕ್ಕೆ 100 ಗರಿಷ್ಠ ಅಂಕಗಳನ್ನು ನಿಗದಿಪಡಿಸಿದ್ದು, ಸಂದರ್ಶನಕ್ಕೆ ಅರ್ಹತೆ ಹೊಂದಲು ಕನಿಷ್ಠ 50 ಅಂಕಗಳನ್ನು ಪಡೆಯಬೇಕಾಗುವುದು. ಅಭ್ಯರ್ಥಿಯು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ, ಹಿರಿಯ ಕನ್ನಡ ಮತ್ತು ಆಂಗ್ಲ ಬೆರಳಚ್ಚು, ಶೀಘ್ರಲಿಪಿ ಪರೀಕ್ಷೆಗಳಲ್ಲಿ ಮತ್ತು ಈ ಪ್ರಾಧಿಕಾರ ನಡೆಸಲಾದ ಶೀಘ್ರಲಿಪಿ ಹಾಗೂ ಬೆರಳಚ್ಚು ಪಡೆದ ಅಂಕಗಳ ಸರಾಸರಿ ಆಧಾರದ ಮೇಲೆ ಒಂದು ಹುದ್ದೆಗೆ ಅನುಪಾತ 1:5 ರಂತೆ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವುದು. ಅಭ್ಯರ್ಥಿಯು ಹುದ್ದೆಗೆ ನಿಗದಿಪಡಿಸಲಾದ ಕನಿಷ್ಟ ವಿದ್ಯಾರ್ಹತೆಯಲ್ಲಿ ಪಡೆದ ಅಂಕಗಳು, ಈ ಪ್ರಾಧಿಕಾರವು ನಡೆಸಲಾದ ಕನ್ನಡ ಮತ್ತು ಆಂಗ್ಲ ಶೀಘ್ರಪಿಲಿ ಹಾಗೂ ಬೆರಳಚ್ಚು ಪರೀಕ್ಷೆಯಲ್ಲಿ ಪಡೆದ ಅಂಕಗಳು ಮತ್ತು ಸಂದರ್ಶನದಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳಲ್ಲಿ, ಮಹಿಳಾ ಅಭ್ಯರ್ಥಿಗಳು, ಮಾಜಿ ಸೈನಿಕ ಅಭ್ಯರ್ಥಿಗಳು, ಯೋಜನಾ ನಿರಾಶ್ರಿತ ಅಭ್ಯರ್ಥಿಗಳು , ಗ್ರಾಮೀನ ಅಭ್ಯರ್ಥಿಗಳು ಹಾಗೂಕನ್ನಡ ಮಾಧ್ಯಮ ಅಭ್ಯರ್ಥಿಗಳು ಮೀಸಲಾತಿಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಿರದೇ ಇದ್ದ ಪಕ್ಷದಲ್ಲಿ ಆ ಹುದ್ದೆಗಳನ್ನು ಆಯಾ ಪಂಗಡಗಳ ಇತರೆ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು. ಆಯಾ ಪಂಗಡಗಳ ಇತರೆ ಅಭ್ಯರ್ಥಿಗಳು ಸಹ ಲಭ್ಯವಾಗದಿದ್ದಲ್ಲಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಸ ಹಾಗೂ ಹಿಂದುಳಿದ ವರ್ಗಗಳಿಗೆ ಆಯಾ ಪ್ರವರ್ಗಗಳ ಅರ್ಹ ಅಭ್ಯರ್ಥಿಗಳ ಲಭ್ಯತೆಯ ಕೊರತೆಯಿಂದಾಗಿ ಭರ್ತಿ ಮಾಡಲಾಗದ ರಿಕ್ತ ಸ್ಥಾನಗಳನ್ನು ಬ್ಯಾಕ್‌ಲಾಗ್ ಎಂದು ಪರಿಗಣಿಸಿ ಮುಂದಕ್ಕೆ ಕೊಂಡೊಯ್ಯಲಾಗುವುದು. ಸಂದರ್ಶನಕ್ಕೆ ಆಯ್ಕೆಯಾಗುವ ಎಲ್ಲಾ ಅಭ್ಯರ್ಥಿಗಳು ಸಂದರ್ಶನಕ್ಕೆ ಕರೆದಾಗ ಹಾವೇರಿಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕಚೇರಿಗೆ ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು.

### ಎರಡೂ ಹುದ್ದೆಗಳಿಗೆ ಸಾಮಾನ್ಯ ನಿಬಂಧನೆಗಳು

- **ವಯೋಮಿತಿ:** ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಯು ಕನಿಷ್ಟ ವಯೋಮಿತಿ 18 ವರ್ಷ ವಯೋಮಿತಿಯನ್ನು ಹೊಂದಿರತಕ್ಕದ್ದು. ಗರಿಷ್ಠ ವಯೋಮಿತಿ,

| | |
|---|---|
| ಸಾಮಾನ್ಯ ವರ್ಗ | 35 ವರ್ಷ |
| ಪ್ರವರ್ಗ 2ಎ, 2ಬಿ, 3ಎ, 3ಬಿ | 38 ವರ್ಷ |
| ಪ.ಜಾತಿ, ಪ.ಪಂಗಡ, ಪ್ರವರ್ಗ-1 | 40 ವರ್ಷ |

ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಗರಿಷ್ಠ ವಯಸ್ಸನ್ನು ಮೀರಿರಕೂಡದು.

- **ವಯೋಮಿತಿ ಸಡಿಲಿಕೆ:**
  ಈ ಕೆಳಗಿನ ಸಂದರ್ಭಗಳಲ್ಲಿ ನೇಮಕಾತಿಯ ಗರಿಷ್ಠ ವಯೋಮಿತಿಯನ್ನು ಆಯಾ ಅಭ್ಯರ್ಥಿಗಳಿಗೆ ನಮೂದಿಸಿರುವ ಮಟ್ಟಿಗೆ ಹೆಚ್ಚಿಸಲಾಗುವುದು.

1. ಅಭ್ಯರ್ಥಿಯು ಅಂಗವಿಕಲನಾಗಿದ್ದಲ್ಲಿ, ವಿಧವೆಯಾಗಿದ್ದಲ್ಲಿ ಮತ್ತು ಜೀತ ಕಾರ್ಮಿಕನಾಗಿದ್ದಲ್ಲಿ 10 ವರ್ಷಗಳು
2. ಅಭ್ಯರ್ಥಿಯು ನ್ಯಾಷನಲ್ ಕೆಡೆಟ್ ಕಾರ್ಪ್ಸ್‌ನಲ್ಲಿ ಪೂರ್ಣಕಾಲಿಕ ಪರೀಕ್ಷಕರಾಗಿ ಸೇವೆ ಸಲ್ಲಿಸಿ ಬಿಡುಗಡೆಯಾಗಿರುವ ವ್ಯಕ್ತಿಯಾಗಿದ್ದರೆ ಅಂತಹ ಕೆಡೆಟ್ ಪರೀಕ್ಷಕನಾಗಿ ಸೇವೆ ಸಲ್ಲಿಸಿದ್ದಷ್ಟು ವರ್ಷಗಳು.

- **ಪರಿವೀಕ್ಷಣಾ ಅವಧಿ:**
  ಆಯ್ಕೆಯಾದ ಅಭ್ಯರ್ಥಿಗಳು ಕರ್ನಾಟಕ ಸೇವಾ ನಿಯಮ (ಪರಿವೀಕ್ಷಣೆ ನಿಯಮಗಳು) 1977ರ ಪ್ರಕಾರ ಎರಡು ವರ್ಷಗಳ ಕಾಲ ಪರಿವೀಕ್ಷಣಾ ಅವಧಿಯಲ್ಲಿರುತ್ತಾರೆ.

*ಸೂಚನೆ: ಶೀಘ್ರಲಿಪಿಗಾರ ಹುದ್ದೆಗೆ ಮಾತ್ರ, ಈ ಪರಿವೀಕ್ಷಣಾ ಅವಧಿಯಲ್ಲಿ ಅಭ್ಯರ್ಥಿಗಳು ಅವರುಗಳ ಹುದ್ದೆಗೆ ನಿಗದಿಪಡಿಸಿರುವ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕು. ಆಯ್ಕೆಯಾದ ಅಭ್ಯರ್ಥಿಗಳು, ಸರ್ಕಾರವು ನಿಗದಿಪಡಿಸುವ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಅವರ ಪರಿವೀಕ್ಷಣಾವಧಿಯೊಳಗೆ ಉತ್ತೀರ್ಣರಾಗಬೇಕು.*

- **ಅಭ್ಯರ್ಥಿಗಳು ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು:**

1. ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ.
2. ಜನ್ಮ ದಿನಾಂಕದ ದೃಢೀಕರಣಕ್ಕಾಗಿ ವರ್ಗಾವಣೆ ಪ್ರಮಾಣ ಪತ್ರ / ಕ್ಯುಮುಲೇಟಿವ್ ರೇಕಾರ್ಡ್/ ಎಸ್.ಎಸ್.ಎಲ್.ಸಿ ಅಂಕಪಟ್ಟಿ.
3. ವಿದ್ಯಾರ್ಹತೆ ಬಗ್ಗೆ ಅಂಕಪಟ್ಟಿಗಳು.
4. ಅರ್ಜಿಯನ್ನು ಸಲ್ಲಿಸಲು ನಿಗದಿಪಡಿಸಿದ ದಿನಾಂಕದಿಂದ 6 ತಿಂಗಳ ಒಳಗಿರುವ ಹಾಗೂ ಅರ್ಜಿದಾರರಿಗೆ ಸಂಬಂಧಿಕರಲ್ಲದ ಇಬ್ಬರು ಗಣ್ಯ ವ್ಯಕ್ತಿಗಳು ನೀಡಿರುವ ನಡತೆ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು.
5. ಅರ್ಜಿಯ ಜೊತೆ ಅಭ್ಯರ್ಥಿಯು ಅಭ್ಯಸಿಸಿದ ಶಾಲೆ / ವಿದ್ಯಾಲಯದಿಂದ ಪಡೆದ ಒಂದು ನಡತೆ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.
6. ಪರಿಶಿಷ್ಟ ಜಾತಿ / ಪರಿಶಿಷ್ಟಪಂಗಡ ಅಭ್ಯರ್ಥಿಗಳು ನಮೂನೆ -'ಡಿ'ಯಲ್ಲಿ, ಪ್ರವರ್ಗ-1ರ ಅಭ್ಯರ್ಥಿಗಳು ನಮೂನೆ ಇಯಲ್ಲಿ ಮತ್ತು 2ಎ, 2ಬಿ, 3ಎ ಮತ್ತು 3ಬಿ ಗೆ ಸೇರಿದ ಅಭ್ಯರ್ಥಿಗಳು ನಮೂನೆ ಎಫ್‌ನಲ್ಲಿ ಸಂಬಂಧಿಸಿದ ತಹಶೀಲ್ದಾರರಿಂದ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಪಡೆದು ಸಲ್ಲಿಸಬೇಕು.

☞ 7

## ಬೇಕಾಗಿದ್ದಾರೆ

ಬೇಸಿಕ್ ನರ್ಸಿಂಗ್ ಅಸಿಸ್ಟೆಂಟ್ (Basic Nursing Assistant) ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ. (Nursing Assistant) ಕೆಲಸ ಗೊತ್ತಿಲ್ಲದ ಮಹಿಳೆಯರಿಗೆ ಸರ್ಕಾರದ ಮಾನ್ಯತೆ ಪಡೆದ ಸಂಸ್ಥೆಯಿಂದ ಉಚಿತವಾಗಿ ಬೇಸಿಕ್ ನರ್ಸಿಂಗ್ ಅಸಿಸ್ಟೆಂಟ್ ತರಬೇತಿ ಕೊಟ್ಟು ಉದ್ಯೋಗ ಒದಗಿಸಲಾಗುತ್ತದೆ. ತರಬೇತಿಯಲ್ಲಿ ತಿಂಗಳಿಗೆ ರೂ. 5000 ಸ್ಟೈಫಂಡ್ರಿ (ಭತ್ಯೆ) (ಸಂಬಳ) ಉಚಿತ ಊಟ, ಉಚಿತ ವಸತಿ (Hostel), ತರಬೇತಿ ನಂತರ ತಿಂಗಳಿಗೆ ರೂ. 10,000/–ದಿಂದ ರೂ. 25,000/–ರವರೆಗೆ ಸಂಬಳ.

**ವಿದ್ಯಾರ್ಹತೆ**: 7ರಿಂದ ಪಿ.ಯು.ಸಿ.ವರೆಗೆ ಪಾಸ್/ಫೇಲ್.

**ವಯೋಮಿತಿ**: 18 ರಿಂದ 25 ವರ್ಷ. ಆಸಕ್ತ ಸೇವಾಮನೋಭಾವವುಳ್ಳ ಮಹಿಳೆಯರು ಸಂಪರ್ಕಿಸಿ. ಮೊದಲು ಬಂದವರಿಗೆ ಆದ್ಯತೆ.

**Job oriental free basic Nursing Center call**

**9731568629, 9482056246**

(ಜಾಹೀರಾತು)

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

# ಶೀಘ್ರಲಿಪಿಗಾರರು ಮತ್ತು ಬೆರಳಚ್ಚುಗಾರರ ಹುದ್ದೆಗಳಿಗೆ ಅರ್ಜಿ ಆಹ್ವಾನ

ತುಮಕೂರು ಜಿಲ್ಲಾ ನ್ಯಾಯಾಂಗ ಘಟಕದಲ್ಲಿ ಖಾಲಿ ಇರುವ ಈ ಕೆಳಕಂಡ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸ ಲಾಗಿದೆ. ಕೆಳಕಂಡ ಷರತ್ತುಗಳನ್ನು ಪೂರೈಸಿದ ಅರ್ಹ ಅಭ್ಯರ್ಥಿಗಳು ಅರ್ಜಿಯನ್ನು - ಇಲ್ಲಿಂದ ಡೌನ್‌ಲೋಡ್ ಮಾಡಿಕೊಂಡು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ತುಮಕೂರು, ತುಮಕೂರು ಜಿಲ್ಲೆ - 572101 ಇವರಿಗೆ ದಿನಾಂಕ 02-02-2017ರ ಸಂಜೆ 5-00 ಗಂಟೆಯೊಳಗೆ ಸಲ್ಲಿಸಲು ಸೂಚಿಸಿದೆ.

**ಖಾಲಿ ಹುದ್ದೆಯ ವಿವರಗಳು:**

| ಕ್ರ.ಸಂ. | ಹುದ್ದೆಯ ಹೆಸರು | ಖಾಲಿ ಹುದ್ದೆಗಳ ಸಂಖ್ಯೆ | ವೇತನ ಶ್ರೇಣಿ |
|---|---|---|---|
| 1. | ಶ್ರೀಘ್ರಲಿಪಿ ಗಾರರು | 20 | 14550-350-15600-400-17200-450-19000-500-21000-600-24600-700-26700 |
| 2. | ಬೆರಳಚ್ಚುಗಾರರು | 6 | 11600-200-12000-250-13000-300-14200-350-15600-400- 17200-450-19000-500-21000 |
| 3. | ಬೆರಳಚ್ಚು-ನಕಲುಗಾರರು | 2 | 11600-200-1200-250-13000-300-14200-350-15600-400-17200-450-19000-500-21000 |
| 4. | ಜಾರಿಪೇದೆ | 11 | 11000-200-12000-250-13000-300-14200-350-15600-400-17200-450-19000 |
| 5. | ಸೇವಕ | 13 | 9600-200-12000-250-13000-300-14200-350-14550 |

**1. ಖಾಲಿ ಹುದ್ದೆಗಳ ವರ್ಗೀಕರಣ:**

**ಶೀಘ್ರಲಿಪಿಗಾರರ ಹುದ್ದೆಗಳು: (ಒಟ್ಟು 20 ಹುದ್ದೆಗಳು)**

| ವರ್ಗೀಕರಣ | ಇತರೆ | ಮ | ಗ್ರಾ | ಕ. ಮಾ. | ಅಂ. | ಮಾ. ಸೈ. | ಒಟ್ಟು |
|---|---|---|---|---|---|---|---|
| ಪರಿಶಿಷ್ಟ ಜಾತಿ | 2 | 1 | 1 | - | - | 1 | 5 |
| ಪ್ರವರ್ಗ-1 | - | - | 1 | - | - | - | 1 |
| ಪ್ರವರ್ಗ-2ಎ | 1 | - | - | - | - | 1 | 2 |
| ಪ್ರವರ್ಗ-2ಬಿ | - | 1 | 1 | - | - | - | 2 |
| ಪ್ರವರ್ಗ-3ಬಿ | - | - | 1 | - | - | - | 1 |
| ಸಾಮಾನ್ಯ | 2 | 2 | 2 | 1 | 1* | 1 | 9 |
| ಒಟ್ಟು | 5 | 4 | 6 | 1 | 1 | 3 | 20 |

* ಒಂದು ಹುದ್ದೆ ಅಂಗವಿಕಲ (ದೃಷ್ಟಿಮಾಂದ್ಯ) ಹುದ್ದೆಯಾಗಿರುತ್ತದೆ.

**ಬೆರಳಚ್ಚುಗಾರರ ಹುದ್ದೆಗಳು: (ಒಟ್ಟು 6 ಹುದ್ದೆಗಳು)**

| ವರ್ಗೀಕರಣ | ಮಹಿಳೆ | ಗ್ರಾಮೀಣ | ಅಂಗವಿಕಲ | ಒಟ್ಟು |
|---|---|---|---|---|
| ಪ್ರಗರ್ವ-2ಎ | - | 1 | - | 1 |
| ಪ್ರವರ್ಗ-2ಬಿ | - | - | 1* | 1 |
| ಪ್ರವರ್ಗ-3ಬಿ | 1 | - | - | 1 |
| ಸಾಮಾನ್ಯ ಅರ್ಹತೆ | 1 | 1 | 1** | 3 |
| ಒಟ್ಟು | 2 | 2 | 2 | 6 |

* ಒಂದು ಹುದ್ದೆ ಅಂಗವಿಕಲ (ದೃಷ್ಟಿಮಾಂದ್ಯ) ಹುದ್ದೆಯಾಗಿರುತ್ತದೆ.

** ಒಂದು ಹುದ್ದೆ ಅಂಗವಿಕಲ (ಶ್ರವಣದೋಷ) ಹುದ್ದೆಯಾಗಿರುತ್ತದೆ.

**ಬೆರಳಚ್ಚು-ನಕಲುಗಾರರ ಹುದ್ದೆಗಳು: (ಒಟ್ಟು 2 ಹುದ್ದೆಗಳು)**

| ವರ್ಗೀಕರಣ | ಮಹಿಳೆ | ಮಾಜಿ ಸೈನಿಕ | ಒಟ್ಟು |
|---|---|---|---|
| ಪರಿಶಿಷ್ಟ ಪಂಗಡ | 1 | - | 1 |
| ಸಾಮಾನ್ಯ ಅರ್ಹತೆ | - | 1 | 1 |
| ಒಟ್ಟು | 1 | 1 | 2 |

**ಜಾರಿಪೇದೆ ಹುದ್ದೆಗಳು: (ಒಟ್ಟು 11 ಹುದ್ದೆಗಳು)**

| ವರ್ಗೀಕರಣ | ಇತರೆ | ಮಹಿಳೆ | ಗ್ರಾಮೀಣ | ಅಂಗ ವಿಕಲ | ಮಾಜಿ ಸೈನಿಕ | ಒಟ್ಟು |
|---|---|---|---|---|---|---|
| ಪರಿಶಿಷ್ಟ ಜಾತಿ | - | - | 1 | - | - | 1 |
| ಪ್ರವರ್ಗ-1 | - | - | - | 1* | - | 1 |
| ಪ್ರವರ್ಗ 2ಎ | - | - | 1 | - | - | 1 |
| ಪ್ರವರ್ಗ-2ಬಿ | - | - | - | 1 | - | 1 |
| ಪ್ರವರ್ಗ-3ಬಿ | - | - | - | 1 | - | 1 |
| ಸಾಮಾನ್ಯ | 2 | 1 | 1 | 1 | 1 | 6 |
| ಒಟ್ಟು | 2 | 1 | 3 | 4 | 1 | 11 |

* ನಾಲ್ಕು ಹುದ್ದೆಗಳು ಅಂಗವಿಕಲ (ದೃಷ್ಟಿಮಾಂದ್ಯ) ಹುದ್ದೆಗಳಾಗಿರುತ್ತದೆ.

**ಸೇವಕ ಹುದ್ದೆಗಳು: (ಒಟ್ಟು 13 ಹುದ್ದೆಗಳು)**

| ವರ್ಗೀಕರಣ | ಇತರೆ | ಮಹಿಳೆ | ಗ್ರಾಮೀಣ | ಅಂಗ ವಿಕಲ | ಮಾಜಿ ಸೈನಿಕ | ಒಟ್ಟು |
|---|---|---|---|---|---|---|
| ಪರಿಶಿಷ್ಟ ಜಾತಿ | - | 1 | 1 | - | - | 2 |
| ಪ್ರವರ್ಗ-1 | - | - | - | 1* | - | 1 |
| ಪ್ರವರ್ಗ-2ಎ | - | 1 | 1 | - | - | 2 |
| ಪ್ರವರ್ಗ-2ಬಿ | - | - | - | 1* | - | 1 |
| ಪ್ರವರ್ಗ-3ಬಿ | - | - | - | 1* | - | 1 |
| ಸಾಮಾನ್ಯ | 2 | 2 | 1 | - | 1 | 6 |
| ಒಟ್ಟು | 2 | 4 | 3 | 3* | 1 | 13 |

* ಮೂರು ಹುದ್ದೆಗಳು ಅಂಗವಿಕಲ (ದೃಷ್ಟಿಮಾಂದ್ಯ) ಹುದ್ದೆಗಳಾಗಿರುತ್ತದೆ.

**2. ನೇಮಕಾತಿ ವಿಧಾನ:**

ಕರ್ನಾಟಕ ಅಧೀನ ನ್ಯಾಯಾಲಯಗಳು (ಲಿಪಿಕ ಮತ್ತು ಇತರ ಹುದ್ದೆಗಳು) (ನೇಮಕಾತಿ) ನಿಯಮಗಳು 1982, ನಿಯಮ 4ರ ಪ್ರಕಾರ ಸರ್ಕಾರ, ಅಧಿಸೂಚನೆ ಸಂಖ್ಯೆ: ಲಾ 01 ಎಲ್‌ಎಸಿ 2005 ದಿನಾಂಕ: 13-02-2008ರ ತಿದ್ದುಪಡಿಯನ್ವಯ.

ಅ. **ಶೀಘ್ರಲಿಪಿಗಾರ:** ಅರ್ಹತಾ ಪರೀಕ್ಷೆಗಳಲ್ಲಿ ಗಳಿಸಿರುವ ಒಟ್ಟು ಶೇಕಡಾವಾರು ಅಂಕಗಳು ಮತ್ತು ಒಂದು ನಿಮಿಷಕ್ಕೆ 120 ಪದಗಳ ದರದಲ್ಲಿ 5 ನಿಮಿಷಗಳ ಉಕ್ತಲೇಖನವನ್ನು ತೆಗೆದುಕೊಂಡು 45 ನಿಮಿಷಗಳಲ್ಲಿ ಅನುಲಿಪಿ ಮಾಡುವ ''ಸಾಮರ್ಥ್ಯ ಪರೀಕ್ಷೆ'' ಯಲ್ಲಿ ಗಳಿಸುವ ಅಂಕಗಳ ಆಧಾರದ ಮೇಲೆ 1:5ರ ಅನುಪಾತದಲ್ಲಿ ಸಂದರ್ಶನ ನಡೆಸಲಾಗುವುದು.

ಆ. **ಬೆರಳಚ್ಚುಗಾರ ಮತ್ತು ಬೆರಳಚ್ಚು-ನಕಲುಗಾರ:** ಅರ್ಹತಾ ಪರೀಕ್ಷೆಗಳಲ್ಲಿ ಗಳಿಸಿರುವ ಒಟ್ಟು ಶೇಕಡಾವಾರು ಅಂಕಗಳು ಮತ್ತು 15 ನಿಮಿಷಗಳ ಉಕ್ತಲೇಖನದಲ್ಲಿ ಕೊಡುವ ವಿಷಯವನ್ನು ಬೆರಳಚ್ಚು ಮಾಡುವ ''ಸಾಮರ್ಥ್ಯ ಪರೀಕ್ಷೆ'' ಯಲ್ಲಿ ಗಳಿಸುವ ಅಂಕಗಳ ಆಧಾರದ ಮೇಲೆ 1:5ರ ಅನುಪಾತದಲ್ಲಿ ಸಂದರ್ಶನ ನಡೆಸಲಾಗುವುದು.

ಇ. **ಜಾರಿಪೇದೆ:** ಅರ್ಹತಾ ಪರೀಕ್ಷೆಯಲ್ಲಿ ಗಳಿಸಿರುವ ಒಟ್ಟು ಶೇಕಡಾವಾರು ಅಂಕಗಳ ಆಧಾರದ ಮೇಲೆ 1:25ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವುದು. ಸಂದರ್ಶನದಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.

ಈ. **ಸೇವಕ:** 7ನೇ ತರಗತಿಯಲ್ಲಿ ಗರಿಷ್ಟ ಅಂಕಗಳ ಅರ್ಹತೆಯ ಆಧಾರದ ಮೇಲೆ 1:10ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವುದು. ಸಂದರ್ಶನದಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.

**3. ವಿದ್ಯಾರ್ಹತೆ:**

ಅ. **ಶೀಘ್ರಲಿಪಿಗಾರರ ಹುದ್ದೆಗೆ:** ಅಭ್ಯರ್ಥಿಯು ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ನಡೆಸುವ ಆಂಗ್ಲ ಹಾಗೂ ಕನ್ನಡ ಭಾಷೆಗಳ ಹಿರಿಯ ಶ್ರೇಣಿಯ ಶೀಘ್ರಲಿಪಿ ಮತ್ತು ಆಂಗ್ಲ ಹಾಗೂ ಕನ್ನಡ ಭಾಷೆಗಳ ಹಿರಿಯ ಶ್ರೇಣಿಯ ಬೆರಳಚ್ಚು ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರಬೇಕು ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು.

ಆ. **ಬೆರಳಚ್ಚುಗಾರರ ಹುದ್ದೆಗೆ:** ಅಭ್ಯರ್ಥಿಯು ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ನಡೆಸುವ ಆಂಗ್ಲ ಹಾಗೂ ಕನ್ನಡ ಭಾಷೆಗಳ ಹಿರಿಯ ಶ್ರೇಣಿಯ ಬೆರಳಚ್ಚು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು.

ಇ. **ಬೆರಳಚ್ಚು-ನಕಲುಗಾರರ ಹುದ್ದೆಗೆ:** ಅಭ್ಯರ್ಥಿಯು ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ನಡೆಸುವ ಆಂಗ್ಲ ಹಾಗೂ ಕನ್ನಡ ಭಾಷೆಗಳ ಕಿರಿಯ ಶ್ರೇಣಿಯ ಬೆರಳಚ್ಚು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು.

ಈ. **ಜಾರಿಪೇದೆ ಹುದ್ದೆಗೆ:** ಅಭ್ಯರ್ಥಿಯು ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಹಾಗೂ ಕನ್ನಡ ಓದಲು ಮತ್ತು ಬರೆಯಲು ಬರಬೇಕು. ಲಘು ವಾಹನ ಚಾಲನಾ ಪರವಾನಗಿ ಹೊಂದಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

ಉ. **ಸೇವಕ ಹುದ್ದೆಗೆ:** 1. 7ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು.
2. ಕನ್ನಡ ಓದಲು ಮತ್ತು ಬರೆಯಲು ಬರಬೇಕು.

**4. ವಯೋಮಿತಿ:**

ಅಭ್ಯರ್ಥಿಯು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ 18 ವರ್ಷ ಪೂರೈಸಿರಬೇಕು.

**ಗರಿಷ್ಠ ವಯೋಮಿತಿ:**

1. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1ರ ಅಭ್ಯರ್ಥಿಗಳಿಗೆ - 40 ವರ್ಷ.
2. ಪ್ರವರ್ಗ-2(ಎ), 2(ಬಿ), 3(ಎ), 3(ಬಿ) ಅಭ್ಯರ್ಥಿಗಳಿಗೆ - 38 ವರ್ಷ.
3. ಸಾಮಾನ್ಯ ಅಭ್ಯರ್ಥಿಗಳೇಗೆ - 35 ವರ್ಷ.

ವಯಸ್ಸಿನ ಮಿತಿಯನ್ನು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ರಾಜ್ಯ/ಕೇಂದ್ರ ಸರ್ಕಾರಿ ನೌಕರರು/ಮಾಜಿ ಸೈನಿಕರು/ಅಂಗವಿಕಲ ಅಭ್ಯರ್ಥಿಗಳು/ಹಾಗೂ ವಿಧವೆಯರ ಬಗ್ಗೆ ಕೆ.ಸಿ.ಎಸ್.(ಸಾಮಾನ್ಯ ನೇಮಕಾತಿ) ನಿಯಮಗಳು 1977ರ ಪ್ರಕಾರ ಸಡಿಲಿಕೆಯನ್ನು ಕೊಡಲಾಗುವುದು.

**5. ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ:**

ಶೀಘ್ರಲಿಪಿಗಾರ, ಬೆಳಚ್ಚುಗಾರ ಮತ್ತು ಬೆರಳಚ್ಚು-ನಕಲುಗಾರ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳು ಕರ್ನಾಟಕ ಸರ್ಕಾರ ಅಧಿಸೂಚನೆ ಸಂಖ್ಯೆ: ಸಿಆಸುಇ 43 2008 ಬೆಂಗಳೂರು, ದಿನಾಂಕ: 7-3-2012ರಂತೆ ನಿಗದಿಪಡಿಸಿರುವ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಆಯ್ಕೆಯಾದ ಮೂರು ತಿಂಗಳೊಳಗೆ 60% ರಂತೆ ಅಂಕಗಳನ್ನು ಪಡೆದು ಉತ್ತೀರ್ಣರಾಗತಕ್ಕದ್ದು. ಇಲ್ಲವಾದಲ್ಲಿ ಅವರ ಆಯ್ಕೆಯನ್ನು ರದ್ದುಪಡಿಸಲಾಗುವುದು.

**6. ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು:**

1. ಹುಟ್ಟಿದ ದಿನಾಂಕದ ಬಗ್ಗೆ ಎಸ್.ಎಸ್.ಎಲ್.ಸಿ. ಅಂಕಪಟ್ಟಿ, ಜನನ ಪ್ರಮಾಣ ಪತ್ರ / ಶಾಲಾ ವರ್ಗಾವಣೆ ಪತ್ರ / ಇನ್ನಾವುದೇ ಅಧಿಕೃತ ಸರ್ಕಾರಿ ದಾಖಲೆ.
2. ವಿದ್ಯಾರ್ಹತೆಗೆ ಸಂಬಂಧಿತ ಅಂಕಪಟ್ಟಿಗಳ ದೃಢೀಕೃತ ನಕಲು.
3. ಈಗಾಗಲೇ ಸರ್ಕಾರಿ ಸೇವೆಯಲ್ಲಿರುವವರು ಸಂಬಂಧಿತ ನೇಮಕಾತಿ ಪ್ರಾಧಿಕಾರದಿಂದ ಪಡೆದ ಸೇವಾ ದೃಢೀಕರಣ ಪತ್ರ.
4. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ನಿಗದಿತ ನಮುನೆ 'ಡಿ' ಯಲ್ಲಿ ಪಡೆದ ಜಾತಿ ಪ್ರಮಾಣ ಪತ್ರ.
5. ಪ್ರವರ್ಗ-1ಕ್ಕೆ ಸೇರಿದ ಅಭ್ಯರ್ಥಿಗಳು ನಿಗದಿತ ನಮೂನೆ 'ಇ' ನಲ್ಲಿ ಪಡೆದ ಜಾತಿ ಪ್ರಮಾಣ ಪತ್ರ.

☞ 6

5 ☜

6. ಪ್ರವರ್ಗ-2(ಎ), 2(ಬಿ), 3(ಎ), 3(ಬಿ), ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ಸರ್ಕಾರಿ ಅಧಿಸೂಚನೆ ಸಂಖ್ಯೆ: ಎಸ್.ಡಬ್ಲ್ಯೂ.ಡಿ. 126 ಬಿಸಿಎ 2002 ದಿ. 13/2/2003ರಲ್ಲಿ ನಿಗದಿಪಡಿಸಿರುವ ನಮೂನೆ 'ಎಫ್' ಪ್ರಕಾರ ಸಂಬಂಧಿತ ತಹಸೀಲ್ದಾರರಿಂದ ಪಡೆದ ಜಾತಿ ಮತ್ತು ಆದಾಯ ದೃಢೀಕರಣ ಪತ್ರ.
7. ಗ್ರಾಮೀಣ ಮೀಸಲಾತಿ ಕೋರುವ ಅಭ್ಯರ್ತಿಗಳು ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ/53/ಸೇನೇನಿ 2007 ದಿ. 04/1/2008ರ ಪ್ರಕಾರ ನಿಗದಿತ ನಮೂನೆ 2ರಲ್ಲಿ ಅಧಿಕೃತ ಅಧಿಕಾರಿಗಳಿಂದ ಪಡೆದು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ಸಹಿಮಾಡಿ ಸಲ್ಲಿಸಬೇಕು. ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳ ಮೀಸಲಾತಿ ಪ್ರಮಾಣಪತ್ರಗಳು ತಿರಸ್ಕೃತಗೊಂಡಲ್ಲಿ ಅವರು ಗ್ರಾಮೀಣ ಮೀಸಲಾತಿಗೂ ಅನರ್ಹರಾಗುತ್ತಾರೆ.
8. ಗ್ರಾಮೀಣ ಮೀಸಲಾತಿಯನ್ನು ಕೋರುವ ಸಾಮಾನ್ಯ ವರ್ಗದ ಅಭ್ಯರ್ಥಿಗಳು ನಮೂನೆ-2ರ ಜೊತೆ ನಮೂನೆ-1ರ ದೃಢೀಕರಣ ಪತ್ರ.
9. ಕನ್ನಡ ಮಾಧ್ಯಮ ಮೀಸಲಾತಿ ಕೋರುವ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ 1 ರಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೇಲುರುಜು ಮತ್ತು ಮೊಹರಿನೊಂದಿಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಬಗ್ಗೆ ಪ್ರಮಾಣ ಪತ್ರ.
10. ಮಾಜಿ ಸೈನಿಕ ಅಭ್ಯರ್ಥಿಗಳೂ ಸೇನೆಯಿಂದ ವಿಮುಕ್ತಿಗೊಂಡ ಬಗ್ಗೆ ಸಂಬಂಧಿತ ಅಧಿಕಾರಿಗಳು ನೀಡಿರುವ ಪ್ರಮಾಣ ಪತ್ರ.
11. ಅಂಗವಿಕಲ ಮೀಸಲಾತಿಯಡಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಜಿಲ್ಲಾ ವೈದ್ಯಾಧಿಕಾರಿಗಳಿಂದ ಪಡೆದ ವೈದ್ಯಕೀಯ ಪ್ರಮಾಣ ಪತ್ರ.
12. ಯೋಜನಾ ನಿರಾಶ್ರಿತ ಅಭ್ಯರ್ಥಿಗಳು ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 44 ಸೇನೇನಿ 2001 ದಿ. 27-7-2001ರ ಪ್ರಕಾರ ಪಡೆದ ನಿಗದಿತ ಪ್ರಮಾಣ ಪತ್ರ.
13. ವಿಧವೆಯರು, ಜೀತಕಾರ್ಮಿಕರು ಮತ್ತು ವಯೋಮಿತಿ ರಿಯಾಯಿತಿಗೆ ಅರ್ಹರಾದ ಇನ್ನಿತರರು ವಯೋಮಿತಿ ರಿಯಾಯಿತಿ ಕೋರಲು ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ.
14. ಅಭ್ಯರ್ಥಿಗಳು ಅರ್ಜಿಯೊಂದಿಗೆ ಕೊನೆಯಲ್ಲಿ ವ್ಯಾಸಂಗ ಮಾಡಿದ ಶಾಲೆ ಅಥವಾ ವಿದ್ಯಾ ಸಂಸ್ಥೆಯಿಂದ ಪಡೆದ ನಡತೆ ಪ್ರಮಾಣ ಪತ್ರದ ಪ್ರತಿ.
15. ಇಬ್ಬರು ಸ್ಥಳೀಯ ಗಣ್ಯ ವ್ಯಕ್ತಿಗಳಿಂದ ಪಡೆದ ನಡತೆ ಪ್ರಮಾಣ ಪತ್ರಗಳು. ಸದರಿ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸುವ ದಿನಾಂಕದಿಂದ 6 ತಿಂಗಳೊಳಗೆ ಪಡೆದಿರಬೇಕು. ಅದಕ್ಕಿಂತಲೂ ಹಿಂದಿನದ್ದಾಗಿದ್ದರೆ ಅಂತಹ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
16. ಸ್ವ-ವಿಳಾಸ ಬರೆದ 5 ರೂ.ಗಳ ಅಂಚೆ ಚೀಟಿ ಅಂಟಿಸಿರುವ ಲಕೋಟೆಯನ್ನು ಭರ್ತಿ ಮಾಡಿದ ಅರ್ಜಿಯೊಂದಿಗೆ ಕಡ್ಡಾಯವಾಗಿ ಸಲ್ಲಿಸುವುದು.
17. ಅಭ್ಯರ್ಥಿಗಳು ಅರ್ಜಿಯೊಂದಿಗೆ ಲಗತ್ತಿಸುವ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು, ದಾಖಲೆಗಳನ್ನು ಸ್ವಯಂ ದೃಢೀಕರಿಸದಿದ್ದಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

**ಅಭ್ಯರ್ಥಿಗಳಿಗೆ ಸೂಚನೆ:**

1. ಅಭ್ಯರ್ಥಿಗಳು ಅರ್ಜಿಯನ್ನು ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ, ಅರ್ಜಿಯೊಂದಿಗೆ ಕ್ರಾಸ್ ಮಾಡಿದ ಕೆಳಕಂಡ ಮೊತ್ತದ ಭಾರತೀಯ ಪೋಸ್ಟಲ್ ಆರ್ಡರ್ (IPO) ಅನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ತುಮಕೂರು ರವರ ಹೆಸರಿಗೆ ಪಡೆದ ಸಲ್ಲಿಸಬೇಕು.
ಅ. ಸಾಮಾನ್ಯ ವರ್ಗ 2(ಎ), 2(ಬಿ), 3(ಎ), 3(ಬಿ) ರೂ. 100/-
ಆ. ಪರಿಶಿಷ್ಟ ಜಾತಿ ಮತ್ತು ಪಂಗಡ ಹಾಗೂ ಪ್ರವರ್ಗ-1 ರೂ. 50/-
2. ಬೇರೆ ಬೇರೆ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಆಯಾ ಹುದ್ದೆಗಳಿಗೆ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸತಕ್ಕದ್ದು.
3. ಅಭ್ಯರ್ಥಿಗಳು ಒಂದು ಹುದ್ದೆಗೆ ಒಂದು ಅರ್ಜಿಯನ್ನು ಮಾತ್ರ ಸಲ್ಲಿಸುವುದು. ಯಾವುದೇ ಮೀಸಲಾತಿಯಡಿ ಅರ್ಜಿ ಸಲ್ಲಿಸಿದ್ದರೂ ಕೂಡ ಸದರಿ ಅರ್ಜಿಯು ಸಾಮಾನ್ಯ ವರ್ಗಕ್ಕೂ ಪರಿಗಣಿಸಲ್ಪಡುತ್ತದೆ.
4. ಅಭ್ಯರ್ಥಿಯು ಈ ಅಧಿಸೂಚನೆಯಲ್ಲಿ ಲಗತ್ತಿಸಿದ ನಿಗದಿತ ಅರ್ಜಿ ನಮೂನೆಯಲ್ಲಿ ಬೆರಳಚ್ಚು/ಗಣಕೀಕೃತ ಪ್ರತಿಯಲ್ಲಿ ಅರ್ಜಿಯನ್ನು ಕನ್ನಡ ಭಾಷೆಯಲ್ಲಿ ಮಾತ್ರ ಭರ್ತಿ ಮಾಡಿ ಸಲ್ಲಿಸತಕ್ಕದ್ದು.
5. ಅರ್ಜಿ ನಮೂನೆಯಲ್ಲಿ ತೋರಿಸಿರುವ ಜಾಗದಲಿ ಅಭ್ಯರ್ಥಿಯು ತನ್ನ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಅಂಟಿಸಿ ಅದರ ಮೇಲೆ ಸಹಿ ಮಾಡಬೇಕು.
6. ನೇಮಕಾತಿಯು ತಾತಕಾಲಿಕವಾಗಿದ್ದು 2 ವರ್ಷ, ಪರೀಕ್ಷಾರ್ಹ ಅವಧಿಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ.
7. ಅಭ್ಯರ್ಥಿಯು ಈಗಾಗಲೇ ಸರ್ಕಾರಿ ನೌಕರಿಯಲ್ಲಿದ್ದರೆ ಅರ್ಜಿಗಳನ್ನು ನೇಮಕಾತಿ ಪ್ರಾಧಿಕಾರದ ಮೂಲಕವೇ ಕಳುಹಿಸಬೇಕು.
8. ಅಂಗವಿಕಲ ಮೀಸಲಾತಿಯಡಿ ನಿಗದಿಪಡಿಸಲಾದ ಅಂಗವೈಕಲ್ಯವುಳ್ಳ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಇತರೆ ಅಂಗವೈಕಲ್ಯವುಳ್ಳ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದು.
9. ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ಪ್ರಕಾರ ಅಥವಾ ಇನ್ಯಾವುದೇ ನಿಯಮಗಳ ಪ್ರಕಾರ ಅಭ್ಯರ್ಥಿಯು ಅನರ್ಹವಾಗಿದ್ದಲ್ಲಿ ನೇಮಕಾತಿಗೆ ಅರ್ಹರಾಗುವುದಿಲ್ಲ.
10. ಮೂಲ ಪ್ರಮಾಣ ಪತ್ರಗಳನ್ನು ಸಂದರ್ಶನದ ಸಮಯದಲ್ಲಿ ಮಾತ್ರ ಹಾಜರುಪಡಿಸತಕ್ಕದ್ದು.
11. ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕವು ಸಾರ್ವತ್ರಿಕ ರಜೆಯಾಗಿ ಘೋಷಿತವಾದಲ್ಲಿ ಆ ದಿನಾಂಕದ ಮುಂದಿನ ಕಛೇರಿ ಕೆಲಸದ ದಿನವು ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕವಾಗುವುದು.
12. ಅರ್ಜಿಯನ್ನು ಕಳುಹಿಸುವ ಲಕೋಟೆಯ ಮೇಲೆ ಹಾಗೂ ಅರ್ಜಿ ನಮೂನೆಯಲ್ಲಿ ಶೀಘ್ರಲಿಪಿಗಾರ ಹುದ್ದೆಗೆ ಅರ್ಜಿ ಸಲ್ಲಿಸುವವರು ''ಶೀಘ್ರಲಿಪಿಗಾರ ಹುದ್ದೆಗಾಗಿ ಅರ್ಜಿ'' ಎಂದೂ, ಬೆರಳಚ್ಚುಗಾರ ಹುದ್ದೆಗೆ ಅರ್ಜಿ ಸಲ್ಲಿಸುವವರು ''ಬೆರಳಚ್ಚುಗಾರ ಹುದ್ದೆಗಾಗಿ ಅರ್ಜಿ'' ಎಂದೂ, ಬೆರಳಚ್ಚು-ನಕಲುಗಾರ ಹುದ್ದೆಗೆ ಅರ್ಜಿ ಸಲ್ಲಿಸುವವರು ''ಬೆರಳಚ್ಚು-ನಕಲುಗಾರ ಹುದ್ದೆಗಾಗಿ ಅರ್ಜಿ'' ಎಂದೂ, ಜಾರಿಪೇದೆ ಹುದ್ದೆಗೆ ಅರ್ಜಿ ಸಲ್ಲಿಸುವವರು ''ಜಾರಿಪೇದೆ ಹುದ್ದೆಗಾಗಿ ಅರ್ಜಿ'' ಎಂದೂ ಮತ್ತು ಸೇವಕ ಹುದ್ದೆಗೆ ಅರ್ಜಿ ಸಲ್ಲಿಸುವವರು ''ಸೇವಕ ಹುದ್ದೆಗಾಗಿ ಅರ್ಜಿ'' ಎಂಬುದನ್ನು ಕಡ್ಡಾಯವಾಗಿ ನಮೂದಿಸುವುದು.
13. ಅಭ್ಯರ್ಥಿಗೆ ಸಂದರ್ಶನದ ಮಾಹಿತಿ ಬಾರದಿದ್ದ ಪಕ್ಷದಲ್ಲಿ ಅವರು ಸಂದರ್ಶನಕ್ಕೆ ಹಾಜರಾಗಲು ಅನರ್ಹರೆಂದು ತಿಳಿಯತಕ್ಕದ್ದು. ಈ ಬಗ್ಗೆ ಯಾವುದೇ ಪತ್ರ ವ್ಯವಹಾರವನ್ನು ನಡೆಸಲಾಗುವುದಿಲ್ಲ.
14. ಅಭ್ಯರ್ಥಿಗಳ ಆಯ್ಕೆಯ ವಿಷಯದಲ್ಲಿ ಆಯ್ಕೆ ಪ್ರಾಧಿಕಾರದ ನಿರ್ಧಾರವೇ ಅಂತಿಮವಾಗಿರುತ್ತದೆ.
15. ಮಾಹಿತಿಯನ್ನು ಸಂಪೂರ್ಣವಾಗಿ ಓದಿ ತಿಳಿದುಕೊಂಡು ನಿಗದಿತ ಅರ್ಜಿ ನಮೂನೆಯಲ್ಲಿ ಎಲ್ಲಾ ಕಾಲಂಗಳನ್ನು ಸಮರ್ಪಕ ಉತ್ತರಗಳಿಂದ ಭರ್ತಿ ಮಾಡತಕ್ಕದ್ದು. ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
16. ಅರ್ಜಿಯೊಂದಿಗೆ ಲಗತ್ತಿಸುವ ಎಲ್ಲಾ ಪ್ರಮಾಣಪತ್ರಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಪಡೆದಿರಬೇಕು ಇಲ್ಲವೇ, ಕೊನೆಯ ದಿನಾಂಕದಂದು ಸಿಂಧುವಾಗಿರಬೇಕು ಮತ್ತು ಕಡ್ಡಾಯವಾಗಿ ಸ್ವಯಂ ದೃಢೀಕರಿಸಿರಬೇಕು.
17. ಅರ್ಜಿ ನಮೂನೆಯನ್ನು ಈ ಕಚೇರಿಯಲ್ಲಿ ಮಾರಾಟ ಮಾಡಲಾಗುವುದಿಲ್ಲ. ಅಭ್ಯರ್ಥಿಗಳು ಅರ್ಜಿಯನ್ನು ecourts.gov.in/Tumakuru ಇಲ್ಲಿಂದ ಡೌನ್‌ಲೋಡ್ ಮಾಡಿಕೊಂಡು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ತುಮಕೂರು, ತುಮಕೂರು ಜಿಲ್ಲೆ - 572101 ಇವರಿಗೆ ದಿನಾಂಕ: 02-02-2017ರ ಸಂಜೆ 5.00 ಗಂಟೆಯೊಳಗೆ ಸಲ್ಲಿಸಲು ಸೂಚಿಸಿದೆ.
18. ಭರ್ತಿ ಮಾಡಿದ ಅರ್ಜಿಗಳನ್ನು ಈ ನ್ಯಾಯಾಲಯದ ಕಛೇರಿಯಲ್ಲಿ ಕರ್ತವ್ಯದ ದಿನಗಳಂದು ಸಂಜೆ 5.00 ಗಂಟೆಯವರೆಗೆ ಮಾತ್ರ ಸ್ವೀಕರಿಸಲಾಗುವುದು.
19. ಕೊನೆಯ ದಿನಾಂಕದ ನಂತರ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

# ಬಾಂದಾ ಕೃಷಿ ವಿಶ್ವವಿದ್ಯಾಲಯ 67 ಪ್ರೊಫೆಸರ್ ಹುದ್ದೆಗಳ ನೇಮಕಾತಿಗೆ ಅರ್ಜಿ

ಉತ್ತರ ಪ್ರದೇಶದಲ್ಲಿರುವ ಬಾಂದಾ ಕೃಷಿ ವಿಜ್ಞಾನ/ವಾಣಿಜ್ಯ ವಿಭಾಗದ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಾಗುತ್ತಿದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

- **ಹುದ್ದೆಗಳ ವಿಂಗಡಣೆ:**
  - ಪ್ರೊಫೆಸರ್ - 4
  - ಅಸೋಸಿಯೇಟ್ ಪ್ರೊಫೆಸರ್ - 22
  - ಅಸಿಸ್ಟೆಂಟ್ ಪ್ರೊಫೆಸರ್ - 41
- **ವೇತನ:**
  ಪ್ರೊಫೆಸರ್ ಹುದ್ದೆಗೆ ರೂ. 37,400-67,000+ಗ್ರೇಡ್ ಪೇ 10,000. ಅಸೋಸಿಯೇಟ್ ಪ್ರೊಫೆಸರ್ ಹುದ್ದೆಗೆ ರೂ. 37,400-67,000+ಗ್ರೇಡ್ ಪೇ 9,000. ಅಸಿಸ್ಟೆಂಟ್ ಪ್ರೊಫೆಸರ್ ಹುದ್ದೆಗೆ ರೂ. 15,600-39,100+ಗ್ರೇಡ್ ಪೇ 6,000
- **ವಯೋಮಿತಿ:**
  ಪ್ರೊಫೆಸರ್ ಹುದ್ದೆಗೆ ಗರಿಷ್ಠ 50 ವರ್ಷ, ಅಸೋಸಿಯೇಟ್ ಪ್ರೊಫೆಸರ್ ಹುದ್ದೆಗೆ ಗರಿಷ್ಠ 45 ವರ್ಷ, ಅಸಿಸ್ಟೆಂಟ್ ಪ್ರೊಫೆಸರ್ ಹುದ್ದೆಗೆ ಗರಿಷ್ಠ 38 ವರ್ಷ ವಯೋಮಿತಿ. ನಿಯಮಗಳಿಗೆ ಅನುಸಾರ ವಯೋಮಿತಿ ಸಡಿಲಿಕೆ ಇದೆ.
- **ವಿದ್ಯಾರ್ಹತೆ:**
  ಆಯಾ ಕೃಷಿ ವಿಜ್ಞಾನ/ ವಾಣಿಜ್ಯ ವಿಭಾಗಗಳಿಗೆ (ಆಗ್ರೋನಮಿ/ ಎಂಟಮಾಲಜಿ/ಪ್ಲಾಂಟ್ ಫೆಥಾಲಜಿ/ಸಾಯ್ಲ್ ಸೈನ್ಸ್/ಜೆನೆಟಿಕ್ಸ್ ಆ್ಯಂಡ್ ಪ್ಲಾಂಟ್ ಬ್ರೀಡಿಂಗ್ ಇತ್ಯಾದಿ) ಅನುಗುಣವಾಗಿ ಸ್ನಾತಕೋತ್ತರ ಪದವಿ (ಸಾಮಾನ್ಯ ವರ್ಗದ ಅಭ್ಯರ್ಥಿಗಳು ಕನಿಷ್ಠ ಶೆ. 55, ಎಸ್‌ಸಿ/ಎಸ್‌ಟಿ/ಒಬಿಸಿ ಅಭ್ಯರ್ಥಿಗಳು ಶೇ. 50 ಅಂಕಗಳಿಸಿರಬೇಕು)/ಪಿಎಚ್‌ಡಿ ವಿದ್ಯಾರ್ಹತೆ ಕೇಳಲಾಗಿದೆ. ಅಸಿಸ್ಟೆಂಟ್ ಪ್ರೊಫೆಸರ್ ಹುದ್ದೆಗೆ ಸ್ನಾತಕೋತ್ತರ ಪದವಿ + ಎನ್‌ಇಟಿ /ಪಿಎಚ್‌ಡಿ ಪೂರೈಸಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.
- **ಅರ್ಜಿ ಸಲ್ಲಿಸುವ ವಿಧಾನ:**
  ಸಂಪೂರ್ಣ ವಿವರಗಳಿರುವ ಅರ್ಜಿ ತಯಾರಿಸಿ, ಅಗತ್ಯ ದಾಖಲಾತಿಗಳ ಸ್ವಯಂ ದೃಢೀಕೃತ ಪ್ರತಿಯನ್ನು (ವಿದ್ಯಾರ್ಹತೆ/ಮೀಸಲಾತಿ/ಕಾರ್ಯಾನುಭವಕ್ಕೆ ಸಂಬಂಧಿಸಿದ ದಾಖಲಾತಿಗಳ ಪ್ರತಿ) ಲಗತ್ತಿಸಿ ಸಂಬಂಧಿಸಿದ ವಿಳಾಸಕ್ಕೆ ಜನವರಿ 31ರ ಒಳಗೆ ತಲುಪುವಂತೆ ಕಳುಹಿಸಬೇಕು. ಅರ್ಜಿ ಶುಲ್ಕ ರೂ. 1,500. (ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳಿಗೆ ರೂ. 750)
- **ನೇಮಕಾತಿ ವಿಧಾನ:**
  ವಿದ್ಯಾರ್ಹತೆಯಲ್ಲಿ ಪಡೆದ ಅಂಕಗಳು /ಕಾರ್ಯಾನುಭವದ ಆಧಾರದ ಮೇಲೆ ಸಂದರ್ಶನ (ದಾಖಲಾತಿ ಪರಿಶೀಲನೆ) ನಡೆಸಿ ನೇಮಕಾತಿ ಮಾಡಿಕೊಳ್ಳಲಾಗುತ್ತದೆ.
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 31-1-2017.**
  ವೆಬ್‌ಸೈಟ್ -www.buat.edu.in

ಮಹಿಳೆಯರಿಗೆ ಸುವರ್ಣಾವಕಾಶ
ಯೂನಿಕ್ ಹೋಂ ನರ್ಸಿಂಗ್ (ರಿ) ಸಂಸ್ಥೆಯ ವತಿಯಿಂದ ಗ್ರಾಮೀಣ ಭಾಗದ ಮಹಿಳೆಯರಿಗೆ ಆರ್ಥಿಕ ಉತ್ತೇಜನಕ್ಕಾಗಿ ಉಚಿತ ಹೋಂ ನರ್ಸಿಂಗ್ ತರಬೇತಿ ನೀಡಿ ಉದ್ಯೋಗ ಕೊಡಲಾಗುವುದು. ತರಬೇತಿ ಸಮಯದಲ್ಲಿ ರೂ. 6000/-ರಿಂದ ರೂ. 8000/- ಸಂಬಳ, ಊಟ, ವಸತಿ ಸೌಲಭ್ಯವಿರುತ್ತದೆ.
ವಿದ್ಯಾರ್ಹತೆ: 7th, SSLC, PUC.
ಆಸಕ್ತರು ತಕ್ಷಣ ಸಂಪರ್ಕಿಸಿ:

ಯೂನಿಕ್ ಹೋಂ ನರ್ಸಿಂಗ್(ರಿ)
(ಸರಕಾರಿ ನೊಂದಾಯಿತ ಸಂಸ್ಥೆ)
ಸ್ಟಾಲ್ ನಂ. 121, 1ನೇ ಮಹಡಿ, ಭವಾನಿ ಆರ್ಕೆಡ್, ಬಸವ ವನ ಎದುರುಗಡೆ, ಹಳೇ ಬಸ್‌ಸ್ಟ್ಯಾಂಡ್ ಹತ್ತಿರ, ಹುಬ್ಬಳ್ಳಿ
9844125671, 9620844472
ಅಭಿಮಾನ ಬಿಲ್ಡಿಂಗ್, 2ನೇ ಮಹಡಿ, ಕೃಷ್ಣಾ ಆಸ್ಪತ್ರೆ ಕೆಳಗಡೆ, ಕಾಳಿ ಆಂಬ್ರೈ, ಚೆನ್ನಮ್ಮ ಸರ್ಕಲ್ ಹತ್ತಿರ, ಬೆಳಗಾವಿ
98441256192, 9036586881
(ಜಾಹೀರಾತು)

ಶ್ರೀ ಭೈರವಿ ಜ್ಯೋತಿಷ್ಯಾಲಯ
ಎಂ.ಜಿ.ರಸ್ತೆ, ಚಿಕ್ಕಮಗಳೂರು-577101.
(ಉಚಿತ ಸಲಹೆ ಮತ್ತು ಉಚಿತ ಪರಿಹಾರ)

ಪಂಡಿತ್ ಅಶೋಕ್‌ಕುಮಾರ್
(ಕಾಳಿಕಾದೇವಿ ಆರಾಧಕರು)

ಇವರು ನಿಮ್ಮ ಜೀವನದ ಯಾವುದೇ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಪ್ರೇಮ ವಿಚಾರ, ಆರೋಗ್ಯ, ಸಂತಾನ, ವಶೀಕರಣ ಇನ್ನು ಮುಂತಾದ ಸಮಸ್ಯೆಗಳಿಗೆ ಅತಿ ಶೀಘ್ರ ಪರಿಹಾರ ನೀಡುತ್ತಾರೆ.
ವಶೀಕರಣ 100% ಗ್ಯಾರಂಟಿ ಪರಿಹಾರ
:: ಕೂಡಲೇ ಸಂಪರ್ಕಿಸಿ ::
9901632039
(ಜಾಹೀರಾತು)

4

7. ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ/96/ಸೇನನಿ/2005, ದಿನಾಂಕ: 10-8-2005ರ ಪ್ರಕಾರ ನಿಗದಿತ ನಮೂನೆ-2ರಲ್ಲಿ ಅಧಿಕೃತ ಅಧಿಕಾರಿಗಳಿಂದ ಪಡೆದು ಅದನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ಸಹಿ ಮಾಡಿಸಿ ಸಲ್ಲಿಸಬೇಕು. ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟಪಂಗಡ ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳು ಮೀಸಲಾತಿ ಪ್ರಮಾಣ ಪತ್ರಗಳು ತಿರಸ್ಕೃತಗೊಂಡಲ್ಲಿ ಅವರು ಗ್ರಾಮೀಣ ಮೀಸಲಾತಿಗೂ ಅನರ್ಹರಾಗುತ್ತಾರೆ.

8. ಗ್ರಾಮೀಣ ಮೀಸಲಾತಿಯನ್ನು ಕೋರುವ ಸಾಮಾನ್ಯ ವರ್ಗದ ಅಭ್ಯರ್ಥಿಗಳು ಪ್ರಮಾಣ ಪತ್ರ, ನಮೂನೆ-2ರ ಜೊತೆ ನಮೂನೆ-1ರಲ್ಲೂ ದೃಢೀ ಕರಣ ಪತ್ರವನ್ನು ಸಲ್ಲಿಸುವುದು.

9. ಕನ್ನಡ ಮಾಧ್ಯಮ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ನಿಗಧಿತ ನಮೂನೆಯಲ್ಲಿ ಕನ್ನಡ ಮಾಧ್ಯದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಮತ್ತು ಕ್ಷೇತ್ರಶಿಕ್ಷಣಾಧಿಕಾಗಳ ಮೇಲುರುಜು ಇರುವ ಕನ್ನಡ ಮಾಧ್ಯಮ ವ್ಯಾಸಂಗ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸುವುದು.

10. ಅಂಗವಿಕಲ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ವೈದ್ಯಕೀಯ ಪ್ರಮಾಣ ಪತ್ರವನ್ನು ದಿನಾಂಕ 19.11.2005ರ ಸರ್ಕಾರದ ಅಧಿಕೃತ ಜ್ಞಾಪನಾ ಸಂಖ್ಯೆ: ಸಿಆಸುಇ/115/ಸೇನನಿ/ 2005 ರಲ್ಲಿ ನಿಗದಿಪಡಿಸಿದ ನಮೂನೆಯಲ್ಲಿ ಅಂಗವಿಕಲತೆಯ ಬಗ್ಗೆ ಜಿಲ್ಲಾ ಮಟ್ಟದ ವೈದ್ಯಕೀಯ ಮಂಡಳಿಯಿಂದ ಪ್ರಮಾಣಪತ್ರವನ್ನು ಪಡೆದು ಸಲ್ಲಿಸಬೇಕು.

11. ಯೋಜನಾ ನಿರಾಶ್ರಿತ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ/44/ಸೇನನಿ/2001ರ ದಿನಾಂಕ: 27-7-2001ರಲ್ಲಿ ನಿಗದಿಪಡಿಸಿದ ನಮೂನೆಯಲ್ಲಿ ಸಂಬಂದಿಸಿದ ತಹಶೀಲ್ದಾರರಿಂದ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸತಕ್ಕದ್ದು.

12. ಮಾಜಿ ಸೈನಿಕ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಸೈನಿಕ ಸೇವೆಯಿಂದ ಬಿಡುಗಡೆಯಾದ /ವಿಮುಕ್ತಿ ಹೊಂದಿದ ಬಗೆಗಿನ ಪ್ರಮಾಣ ಪತ್ರವನ್ನು ಸಲ್ಲಿಸುವುದು.

13. ವಿಧವೆಯರು, ಜೀತ ಕಾರ್ಮಿಕರು ಮತ್ತು ವಯೋಮಿತಿ ರಿಯಾಯಿತಿಗೆ ಅರ್ಹರಾದ ಇನ್ನಿತರರು ವಯೋಮಿತಿ ರಿಯಾಯಿತಿ ಕೋರಲು ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರವನ್ನು ಸಲ್ಲಿಸುವುದು.

■ **ವಿಶೇಷ ಸೂಚನೆ:**

- ಅರ್ಜಿಯೊಂದಿಗೆ ಲಗತ್ತಿಸುವ ಎಲ್ಲಾ ಪ್ರಮಾಣ ಪತ್ರಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಪಡೆದು ಲಗತ್ತಿಸಿರಬೇಕು ಇಲ್ಲವೇ ಕೊನೆಯ ದಿನಾಂಕದಂದು ಸಿಂಧುವಾಗಿರಬೇಕು ಮತ್ತು ಕಡ್ಡಾಯವಾಗಿ ಸ್ವಯಂ ದೃಢೀಕರಿಸಿರಬೇಕು.
- ಅಭ್ಯರ್ಥಿಯು ವ್ಯಾಸಂಗ ಮಾಡಿದ ಶಾಲೆಯಿಂದ ಮುಖ್ಯೋಪಾಧ್ಯಾಯರಿಂದ ಸಹಿ ಹಾಗೂ ಸಂಬಂಧಪಟ್ಟ ಕ್ಷೇತ್ರಶಿಕ್ಷಣಾಧಿಕಾರಿಯವರಿಂದ ಮೇಲುರುಜು ಪಡೆದ 7ನೇ ತರಗತಿಯ ಅಂಕಪಟ್ಟಿಯ ಮೇಲೆ ನಕಲು ಪ್ರತಿಯನ್ನು ಸ್ವಯಂ ದೃಢೀಕರಿಸಿ ಲಗತ್ತಿಸಬೇಕು.
- ಅರ್ಜಿ ನಮೂನೆಯಲ್ಲಿ ಅಭ್ಯರ್ಥಿಯ ಖಾಯಂ ವಿಳಾಸವನ್ನು ಕಡ್ಡಾಯವಾಗಿ ನಮೂದಿಸಬೇಕು. ಒಂದು ವೇಳೆ ಅಭ್ಯರ್ಥಿಯ ವಿಳಾಸ ಬದಲಾವಣೆಯಾದಲ್ಲಿ ತಕ್ಷಣವೇ ಈ ಕಚೇರಿಗೆ ಮಾಹಿತಿ ತಿಳಿಸಬೇಕು. ತಪ್ಪಿದಲ್ಲಿ ಮುಂದಿನ ಪತ್ರ ವ್ಯವಹಾರಗಳಿಗೆ ಅಭ್ಯರ್ಥಿಗಳೇ ಜವಾಬ್ದಾರರು.
- 7ನೇ ತರಗತಿಯ ಅಂಕಗಳು ಶ್ರೇಣಿಯಲ್ಲಿದ್ದರೆ (Grade), ಅದನ್ನು ಅಂಕಗಳಾಗಿ ಪರಿವರ್ತಿಸಿ, ಗರಿಷ್ಠ ಅಂಕಗಳು ಮತ್ತು ಪಡೆದ ಅಂಕಗಳ ಒಟ್ಟು ಶೇಕಡಾವಾರು ನಮೂದ ಇರಬೇಕು ಮತ್ತು ಅಂಕಪಟ್ಟಿಯನ್ನು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದು ಸಲ್ಲಿಸಬೇಕು.
- ಅಂಕಪಟ್ಟಿಯಲ್ಲಿ ತ್ರೈಮಾಸಿಕ ಅಂಕಗಳಲ್ಲಿದ್ದರೆ, ಎಲ್ಲಾ ತ್ರೈಮಾಸಿಕ ಅಂಕಗಳನ್ನು ಕ್ರೋಢೀಕರಿಸಿ ಅಂಕಪಟ್ಟಿಯನ್ನು ಸಲ್ಲಿಸಬೇಕು.
- ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ದಿನಾಂಕವು ಸಾರ್ವಜನಿಕ ರಜೆಯಾಗಿದ್ದರೆ ಮುಂದಿನ ಕಚೇರಿ ಕೆಲಸದ ದಿನ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಎಂದು ತಿಳಿಯುವುದು.
- ಈ ಅಧಿಸೂಚನೆಯು ಚಾಲ್ತಿಯಲ್ಲಿರುವ ಮತ್ತು ಕಾಲ-ಕಾಲಕ್ಕೆ ಸರ್ಕಾರದಿಂದ ಹೊರಡಿಸಲ್ಪಡುವ ಆದೇಶಗಳಿಗೆ ಒಳಪಟ್ಟಿರುತ್ತದೆ.
- ಯಾವುದೇ ಅಭ್ಯರ್ಥಿಯು ಸಂದರ್ಶನದ ಬಗ್ಗೆ ಮಾಹಿತಿ ಬರದಿದ್ದರೆ, ಅವರು ಸಂದರ್ಶನಕ್ಕೆ ಅರ್ಹರಲ್ಲ ಎಂದು ತಿಳಿಯುವುದು ಮತ್ತು ಈ ಬಗ್ಗೆ ಯಾವುದೇ ಪತ್ರ ವ್ಯವಹಾರವನ್ನು ಮಾಡಲಾಗುವುದಿಲ್ಲ.

■ **ಅರ್ಜಿ ಸಲ್ಲಿಸುವ ವಿಧಾನ:**

ಅಧಿಸೂಚನೆಯ ಪ್ರತಿಯನ್ನು ಹಾಗೂ ನಿಗದಿತ ಅರ್ಜಿ ನಮೂನೆಯನ್ನು ಜಿಲ್ಲಾ ನ್ಯಾಯಾಲಯದ ಅಂತರ್ಜಾಲದ ವಿಳಾಸ http://ecourts.gov.in/india/karnataka/haveri/recruitment ಇಂದ ಪಡೆದು, ತಮ್ಮ ಸ್ವಂತ ಕೈಬರಹದಲ್ಲಿ ತಮಗೆ ಅನ್ವಯಿಸುವ ಎಲ್ಲಾ ಅಂಕಣಗಳನ್ನು ಭರ್ತಿ ಮಾಡುವುದು. ಅಭ್ಯರ್ಥಿಯು ತನ್ನ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಅರ್ಜಿಯ ಮೇಲೆ ಅಂಟಿಸಿ, ಅದರ ಮೇಲೆ ಸಹಿ ಮಾಡುವುದು ಹಾಗೂ ಅರ್ಜಿ ನಮೂನೆಯ ಕೊನೆಯಲ್ಲಿ ಘೋಷಣೆಯ ನಂತರ ಸಹಿ ಮಾಡುವುದು. ಹುದ್ದೆಗೆ ಸಂಬಂಧಿಸಿದ ವಿದ್ಯಾರ್ಹತೆ, ವಯಸ್ಸು ಮತ್ತು ಕೋರಿರುವ ಮೀಸಲಾತಿಗೆ ಸಂಬಂಧಿಸಿದಂತೆ ಪ್ರಮಾಣ ಪತ್ರಗಳನ್ನು ಅಧಿಕೃತ ಅಧಿಕಾರಿಗಳಿಂದ ಪಡೆದು, ಅವುಗಳ ನಕಲು ಪ್ರತಿಗಳನ್ನು ಸ್ವಯಂ ದೃಢೀಕರಿಸಿ ಅರ್ಜಿಯೊಂದಿಗೆ ಲಗತ್ತಿಸಿ ಅರ್ಜಿಯನ್ನು "ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಹಾವೇರಿ" ಇವರಿಗೆ ಆಯಾ ಹುದ್ದೆಗೆ ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ತಲುಪುವಂತೆ ಕಳುಹಿಸುವುದು. ಅರ್ಜಿಯನ್ನು ಕಳುಹಿಸುವ ಲಕೋಟೆಯ ಮೇಲೆ ಅಭ್ಯರ್ಥಿಯು ಯಾವ ಹುದ್ದೆಗೆ ಅರ್ಜಿ ಸಲ್ಲಿಸುತ್ತಿದ್ದಾರೋ ಆ ಹುದ್ದೆಯ ಹೆಸರನ್ನು ಕಡ್ಡಾಯವಾಗಿ ನಮೂದಿಸುವುದು.

■ **ಜವಾನ ಹುದ್ದೆಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** 16.02.2017

■ **ಶೀಘ್ರಲಿಪಿಗಾರ ಹುದ್ದೆಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** 18.02.2017

**ತಕ್ಷಣ ಬೇಕಾಗಿದ್ದಾರೆ.**

**B-INSPIRE BRANCH**

ತುಮಕೂರು ವಿಭಾಗಕ್ಕೆ ಕ್ರಿಯಾಶೀಲ ಯುವಕರು ಬೇಕಾಗಿದ್ದಾರೆ.

Age: 18-28

Earn : 8,000-16,000/- P.M.

10th, PUC, ಯಾವುದೇ Degree.

ಗ್ರಾಮೀಣ ಅಭ್ಯರ್ಥಿಗಳಿಗೆ ಆದ್ಯತೆ.

ಉಚಿತ ತರಬೇತಿ, ವಸತಿ,

**9980487857**

**9886126580**

ಜಾಹೀರಾತು

# ಭಾಭಾ ಅಣು ಸಂಶೋಧನಾ ಕೇಂದ್ರದಲ್ಲಿ ಹುದ್ದೆಗಳ ನೇಮಕ

ಕಲ್ಪಾಕಂನಲ್ಲಿರುವ ಸಂಶೋಧನಾ ಕೇಂದ್ರದಲ್ಲಿ(ಬಾರ್ಕ್) ವಿವಿಧ ವಿಭಾಗಗಳ (ತಾಂತ್ರಿಕ ಮತ್ತು ತಾಂತ್ರಿಕೇತರ) ಟ್ರೈನಿ ಹಾಗೂ ಕರ್ತವ್ಯ ನಿಯೋಜನಾ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಾಗುತ್ತಿದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

■ **ಒಟ್ಟು ಹುದ್ದೆಗಳು : 99**

■ **ಹುದ್ದೆಗಳ ವಿಂಗಡಣೆ:**

- ಟ್ರೈನಿ ವಿಭಾಗಗಳು-86
- ಕರ್ತವ್ಯ ನಿಯೋಜನಾ ವಿಭಾಗಗಳು - 13

■ **ಸ್ಟೈಪೆಂಡ್:** ಟ್ರೈನಿ ವಿಭಾಗಕ್ಕೆ ಮೊದಲ ವರ್ಷ ಮಾಸಿಕ ರೂ. 6,200 ಮತ್ತು ದ್ವಿತೀಯ ವರ್ಷ ಮಾಸಿಕ ರೂ. 7,200 ಸ್ಟೈಪೆಂಡ್. ಕರ್ತವ್ಯ ನಿಯೋಜನಾ ವಿಭಾಗಕ್ಕೆ ರೂ. 25,500 ವೇತನ.

■ **ವಯೋಮಿತಿ :** ಟ್ರೈನಿ ವಿಭಾಗಕ್ಕೆ ಕನಿಷ್ಠ 18 ರಿಂದ ಗರಿಷ್ಠ 22 ವರ್ಷ. ಟೆಕ್ನಿಷಿಯನ್ ಹುದ್ದೆಗೆ ಕನಿಷ್ಠ 18 ರಿಂದ ಗರಿಷ್ಠ 25 ವರ್ಷ ಮತ್ತು ಅಪ್ಪರ್ ಡಿವಿಷನ್ ಕ್ಲರ್ಕ್ ಹುದ್ದೆಗೆ ಕನಿಷ್ಠ 18 ರಿಂದ ಗರಿಷ್ಠ 27 ವರ್ಷ ವಯೋಮಿತಿಯನ್ನು ನಿಗದಿಪಡಿಸಲಾಗಿದೆ. ಒಬಿಸಿ ಅಭ್ಯರ್ಥಿಗಳಿಗೆ 3 ವರ್ಷ, ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷಗಳ ಮತ್ತು ಅಂಗವಿಕಲ ಅಭ್ಯರ್ಥಿಗಳಿಗೆ ಹೆಚ್ಚುವರಿ 10 ವರ್ಷ ವಯೋಸಡಿಲಿಕೆ ಇದೆ.

■ **ಅರ್ಹತೆ:** ಟ್ರೈನಿ ವಿಭಾಗಗಳಿಗೆ ಆಯಾ ವಿಭಾಗಕ್ಕೆ ಸಂಬಂಧಿಸಿದ ವಿಷಯದಲ್ಲಿ ಅಂಗೀಕೃತ ವಿಶ್ವವಿದ್ಯಾಲಯ/ಮಂಡಳಿಯಿಂದ ಪಿಯುಸಿ (ವಿಜ್ಞಾನ) ಐಟಿಐ ಪೂರೈಸಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಟೆಕ್ನಿಷಿಯನ್ ಹುದ್ದೆಗೆ ಬಾಯ್ಲರ್ ಆಪರೇಟರ್ ವಿಷಯದಲ್ಲಿ ಪ್ರಮಾಣ ಪತ್ರ, ಅಪ್ಪರ್ ಡಿವಿಷನ್ ಕ್ಲರ್ಕ್ ಹುದ್ದೆಗೆ ಕನಿಷ್ಠ ಶೇ. 50 ಅಂಕಗಳೊಂದಿಗೆ ಯಾವುದೇ ವಿಷಯದಲ್ಲಿ ಪದವಿ ಹೊಂದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

■ **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದ್ದು, ಚಲನ್ ಮೂಲಕ ರೂ. 100(ಎಸ್‌ಸಿ/ಎಸ್‌ಟಿ/ಅಂಗವಿಕಲ ಅಭ್ಯರ್ಥಿಗಳಿಗೆ ಶುಲ್ಕ ವಿನಾಯ್ತಿ ಇದೆ) ಅರ್ಜಿ ಶುಲ್ಕ ಸಲ್ಲಿಸಬೇಕಾಗುತ್ತದೆ.

■ **ನೇಮಕಾತಿ ವಿಧಾನ:** ಎರಡು ಹಂತಗಳಲ್ಲಿ ಲಿಖಿತ ಪರೀಕ್ಷೆ (ಪ್ರಿಲಿಮಿನರಿ ಟೆಸ್ಟ್ ಮತ್ತು ಅಡ್ವಾನ್ಸ್‌ಡ್ ಟೆಸ್ಟ್) ನಡೆಸಲಾಗುತ್ತದೆ. ಮೊದಲ ಹಂತದ ಪ್ರಿಲಿಮಿನರಿ ಟೆಸ್ಟ್‌ನಲ್ಲಿ ನಿಗದಿತ ಅಂಕಗಳನ್ನು ಪಡೆದವರಿಗೆ ಮಾತ್ರ 2ನೇ ಹಂತದ ಅಡ್ವಾನ್ಸ್‌ಡ್ ಟೆಸ್ಟ್ ಬರೆಯಲು ಅವಕಾಶ. ಅಡ್ವಾನ್ಸ್‌ಡ್ ಟೆಸ್ಟ್‌ನಲ್ಲಿ ಪಡೆದ ಅಂಕಗಳನ್ನು ಸಿದ್ಧಪಡಿಸಲಾಗುತ್ತದೆ ಮತ್ತು 3ನೇ ಹಂತದಲ್ಲಿ ಕೌಶಲ ಪರೀಕ್ಷೆ/ವಿಭಾಗ ಪರೀಕ್ಷೆ ನಡೆಸಲಾಗುತ್ತದೆ. ಈ ಮೂರೂ ಹಂತಗಳನ್ನು ಯಶಸ್ವಿಯಾಗಿ ಪೂರೈಸುವ ಅಭ್ಯರ್ಥಿಗಳಿಗೆ ಸಂದರ್ಶನ (ದಾಖಲಾತಿ ಪರಿಶೀಲನೆ) ನಡೆಸಿ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ನೇಮಕಾತಿಗೆ ಸಂಬಂಧಿಸಿದಂತೆ ವರ್ಗವಾರು ಸಾಮಾನ್ಯ ಮೀಸಲಾತಿ ಅನ್ವಯ.

■ **ಅರ್ಜಿ ಸಲ್ಲಿಸಲು ಕೊನೆಯ ದಿನ ಜನವರಿ 31.**

ವೆಬ್‌ಸೈಟ್ : www.barcrecruit.gov.in

# ಖಾಲಿ ಹುದ್ದೆಗಳ ಭರ್ತಿ ಯಾವಾಗ ?

ಉದ್ಯೋಗ ಸ್ಫೂರ್ತಿಯು ಸಾರ್ವಜನಿಕ ಶಿಕ್ಷಣ ಇಲಾಖೆಗೆ ಮಾಹಿತಿ ಹಕ್ಕು ಅಧಿನಿಯಮ 2005ರ ನಿಯಮದಡಿ ಇಲಾಖೆಯಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳ ಸಂಖ್ಯೆ, ಮಂಜೂರಾದ ಹುದ್ದೆ (ಬೋಧಕರ)ಗಳ ಸಂಖ್ಯೆ, ಹಾಲಿ ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ, ಈಗ ಖಾಲಿ ಇರುವ ಶಿಕ್ಷಕರ ಸಂಖ್ಯೆಗಳ ಬಗ್ಗೆ ಮಾಹಿತಿ ಕೇಳಲಾಗಿತ್ತು. ಇಲಾಖೆಯು ಮಾಹಿತಿಗಳನ್ನು ನೀಡಿರುವ ಪ್ರಕಾರ...

| | | |
|---|---|---|
| 1. ಸರ್ಕಾರಿ ಪ್ರಾಥಮಿಕ ಶಾಲೆಗಳ ಸಂಖ್ಯೆ | - | 44,101 |
| 2. ಆರ್‌ಟಿಐ ನಿಯಮದ ಪ್ರಕಾರ ಮಂಜೂರಾದ ಹುದ್ದೆಗಳು | - | 1,83,928 |
| 3. ಹಾಲಿ ಕಾರ್ಯನಿರ್ವಹಿಸುತ್ತಿರುವವರು | - | 1,69,777 |
| 4. ಖಾಲಿ ಹುದ್ದೆಗಳು | - | 14,804 |

ರಂತೆ ಮಾಹಿತಿ ನೀಡಿದೆ. ಈಗ ಖಾಲಿ ಇರುವ 14804 ಹುದ್ದೆಗಳನ್ನು ಭರ್ತಿ ಮಾಡಲು ಇತ್ತೀಚೆಗೆ ಟಿಇಟಿ ಪರೀಕ್ಷೆಯನ್ನು ನಡೆಸಲಾಗಿದ್ದು, ಇದರ ಫಲಿತಾಂಶದ ನಂತರ ಶಿಕ್ಷಕ ಖಾಲಿ ಹುದ್ದೆಗೆ ಅರ್ಜಿ ಕರೆಯಲಾಗುತ್ತದೆ. ಆದರೆ ಎಷ್ಟು ಹುದ್ದೆಗಳಿಗೆ ಅರ್ಜಿ ಕರೆಯುತ್ತಾರೆಂಬುದನ್ನು ಕಾದುನೋಡಬೇಕು.

ನಾವು ಆರ್‌ಟಿಐ ಮಾಹಿತಿ ಕೇಳುವಾಗ ಪ್ರೌಢಶಾಲೆಗಳ ಹಾಗೂ ಪ.ಪೂರ್ವ ಕಾಲೇಜುಗಳ ಮಾಹಿತಿಯನ್ನು ಕೇಳಿದ್ದೆವು. ಆದರೆ ಇಲಾಖೆಯು ಪ್ರಾಥಮಿಕ ಶಾಲೆಗಳ ಮಾಹಿತಿಯನ್ನು ಮಾತ್ರ ನೀಡಿದ್ದಾರೆ. ನಿಮಗೂ ಸಹ ಯಾವುದಾದರೂ ಮಾಹಿತಿ ಬೇಕಾದಲ್ಲಿ ನಮಗೆ ತಿಳಿಸಿದರೆ ನಾವು ನಿಮ್ಮ ಪರವಾಗಿ ಆ ಮಾಹಿತಿಯನ್ನು ಸಂಗ್ರಹಿಸಿ ಪತ್ರಿಕೆಯಲ್ಲಿ ಪ್ರಕಟಿಸುತ್ತೇವೆ. ಇದರಿಂದ ನಿಮಗೆ ಉಪಯೋಗವಾಗುವುದಾದರೆ ಅದಕ್ಕಿಂತ ಬೇರೇನಿದೆ?

-ಸಂಪಾದಕರು

**LG ಕಂಪನಿಯಲ್ಲಿ ನೇರ ಆಯ್ಕೆ**

ಪ್ರತಿಷ್ಠಿತ LG ಕಂಪನಿಯಲ್ಲಿ 920 ಪರ್ಮನೆಂಟ್ ಹುದ್ದೆಗಳಿಗೆ ನೇರ ನೇಮಕಾತಿ.

SSLC, PUC, ITI, JOC, Degree, Diplomo, BE, MBA ಯಾವುದೇ ವಿದ್ಯಾರ್ಹತೆ Pass/Fail ಆದಂತಹ ಯಾವುದೇ ಅಭ್ಯರ್ಥಿಗಳಿಗೆ ಬಂದ ದಿನವೇ ನೇರ ಆಯ್ಕೆ.

ಉಚಿತ ವಸತಿ ಸೌಲಭ್ಯ ಹಾಗೂ ತಿಂಗಳಿಗೆ ರೂ. 21,600/- ರಿಂದ 30,800/- ಗಳಿಸುವ ಅವಕಾಶ.

ಇಂದೇ ಸಂಪರ್ಕಿಸಿ: **8970834574**

ಸ್ವಿತಾ **9008624829**

(ಜಾಹೀರಾತು)

## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ

# ದರ್ಜೆ-2ರ ಅಧಿಕಾರಿ ಹುದ್ದೆಗಳ ನೇರ ನೇಮಕಾತಿ

ಕರ್ನಾಟಕ ರಾಜ್ಯದ ರಸ್ತೆ ಸಾರಿಗೆ ಸಂಸ್ಥೆಗೆ ಅವಶ್ಯವಿರುವ ಈ ಕೆಳಕಂಡ ''ದರ್ಜೆ-2ರ ಅಧಿಕಾರಿ'' ಹುದ್ದೆಗಳನ್ನು, ಸಂಸ್ಥೆಯ (ಪದವೃಂದ ಮತ್ತು ನೇಮಕ) ನಿಯಮಾವಳಿ 1982 ಮತ್ತು ತದನಂತರದ ತಿದ್ದುಪಡಿಗಳ ಅನುಸಾರ ನೇರ ನೇಮಕಾತಿ ಮೂಲಕ ತುಂಬಲು ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ (ON LINE) ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹುದ್ದೆಗಳು ಮತ್ತು ಅವುಗಳ ಮೀಸಲಾತಿ ವಿವರ ಈ ಕೆಳಕಾಣಿಸಿದಂತಿರುತ್ತದೆ.

**ಸಹಾಯಕ ಆಡಳಿತಾಧಿಕಾರಿ**

| ಮೀಸಲಾತಿ | ಪ. ಜಾ. | ಪ. ಪಂ. | ವರ್ಗ -1 | 2ಎ | 2ಬಿ | 3ಎ | 3ಬಿ | ಸಾ. ಅ. | ಒಟ್ಟು |
|---|---|---|---|---|---|---|---|---|---|
| ಗ್ರಾಮೀಣ | 0 | 0 | 0 | 1 | 0 | 0 | 0 | 0 | 1 |
| ಅಂಗವಿಕಲ Low vision | 0 | 0 | 0 | 0 | 0 | 0 | 0 | 1 | 1 |
| ಒಟ್ಟು | 0 | 0 | 0 | 1 | 0 | 0 | 0 | 1 | 2 |

**ಸಹಾಯಕ ಲೆಕ್ಕಾಧಿಕಾರಿ (GMPHಹಿಂಬಾಕಿ-ಒಂದು ಹುದ್ದೆ)**

| ಮೀಸಲಾತಿ | ಪ. ಜಾ. | ಪ. ಪಂ. | ವರ್ಗ -1 | 2ಎ | 2ಬಿ | 3ಎ | 3ಬಿ | ಸಾ. ಅ. | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 1 | 0 | 0 | 0 | 0 | 0 | 0 | 1 | 2 |
| ಮಹಿಳೆ | 0 | 1 | 0 | 0 | 0 | 0 | 0 | 0 | 1 |
| ಮಾ.ಸೈನಿಕ | 0 | 0 | 0 | 0 | 0 | 0 | 0 | 1 | 1 |
| ಅಂಗವಿಕಲ Low vision | 0 | 0 | 0 | 0 | 0 | 0 | 0 | 1 | 1 |
| ಒಟ್ಟು | 1 | 1 | 0 | 0 | 0 | 0 | 0 | 3 | 5 |

**ಸಹಾಯಕ ಸಂಚಾರ ವ್ಯವಸ್ಥಾಪಕರು (2AWಹಿಂಬಾಕಿ-ಒಂದು ಹುದ್ದೆ)**

| ಮೀಸಲಾತಿ | ಪ. ಜಾ. | ಪ. ಪಂ. | ವರ್ಗ -1 | 2ಎ | 2ಬಿ | 3ಎ | 3ಬಿ | ಸಾ. ಅ. | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 1 | 0 | 0 | 1 | 0 | 1 | 1 | 4 | 8 |
| ಮಹಿಳೆ | 1 | 0 | 1 | 2 | 0 | 0 | 1 | 4 | 9 |
| ಗ್ರಾಮೀಣ | 1 | 1 | 0 | 1 | 0 | 0 | 0 | 3 | 6 |
| ಮಾ.ಸೈನಿಕ | 0 | 0 | 0 | 0 | 0 | 0 | 0 | 1 | 1 |
| ಒಟ್ಟು | 3 | 1 | 1 | 4 | 0 | 1 | 2 | 12 | 24 |

**ಸಹಾಯಕ ತಾಂತ್ರಿಕ ಅಭಿಯಂತರರು**

| ಮೀಸಲಾತಿ | ಪ. ಜಾ. | ಪ. ಪಂ. | ವರ್ಗ -1 | 2ಎ | 2ಬಿ | 3ಎ | 3ಬಿ | ಸಾ. ಅ. | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 0 | 0 | 0 | 1 | 0 | 0 | 0 | 1 | 2 |
| ಮಹಿಳೆ | 1 | 0 | 0 | 0 | 1 | 1 | 0 | 2 | 5 |
| ಗ್ರಾಮೀಣ | 0 | 0 | 0 | 0 | 0 | 0 | 1 | 1 | 2 |
| ಮಾಜಿ ಸೈನಿಕ | 0 | 0 | 0 | 0 | 0 | 0 | 0 | 1 | 1 |
| ಅಂಗವಿಕಲ Hearing impaired | 0 | 0 | 0 | 0 | 0 | 0 | 0 | 1 | 1 |
| ಒಟ್ಟು | 1 | 0 | 0 | 1 | 1 | 1 | 1 | 6 | 11 |

**ಸಹಾಯಕ ಉಗ್ರಾಣಾಧಿಕಾರಿ**

| ಮೀಸಲಾತಿ | ಪ. ಜಾ. | ಪ. ಪಂ. | ವರ್ಗ -1 | 2ಎ | 2ಬಿ | 3ಎ | 3ಬಿ | ಸಾ. ಅ. | ಒಟ್ಟು |
|---|---|---|---|---|---|---|---|---|---|
| ಮಹಿಳೆ | 0 | 1 | 0 | 0 | 0 | 0 | 0 | 1 | 2 |
| ಗ್ರಾಮೀಣ | 0 | 0 | 0 | 1 | 0 | 0 | 0 | 0 | 1 |
| ಅಂಗವಿಕಲ Low vision | 0 | 0 | 0 | 0 | 0 | 0 | 0 | 1 | 1 |
| ಒಟ್ಟು | 0 | 1 | 0 | 1 | 0 | 0 | 0 | 2 | 4 |

**ಭದ್ರತಾ ಮತ್ತು ಜಾಗೃತಾಧಿಕಾರಿ**

| ಮೀಸಲಾತಿ | ಪ. ಜಾ. | ಪ. ಪಂ. | ವರ್ಗ -1 | 2ಎ | 2ಬಿ | 3ಎ | 3ಬಿ | ಸಾ. ಅ. | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 1 | 0 | 0 | 0 | 0 | 0 | 0 | 1 | 2 |
| ಮಹಿಳೆ | 0 | 0 | 0 | 0 | 0 | 0 | 0 | 1 | 1 |
| ಗ್ರಾಮೀಣ | 0 | 0 | 0 | 1 | 0 | 0 | 0 | 0 | 1 |
| ಮಾ.ಸೈನಿಕ | 0 | 0 | 0 | 0 | 0 | 0 | 0 | 1 | 1 |
| ಒಟ್ಟು | 1 | 0 | 0 | 1 | 0 | 0 | 0 | 3 | 5 |

**ಸಹಾಯಕ ಗಣಕ ವ್ಯವಸ್ಥಾಪಕರು**

| ಮೀಸಲಾತಿ | ಪ. ಜಾ. | ಪ. ಪಂ. | ವರ್ಗ -1 | 2ಎ | 2ಬಿ | 3ಎ | 3ಬಿ | ಸಾ. ಅ. | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 0 | 0 | 0 | 0 | 1 | 0 | 0 | 0 | 1 |
| ಗ್ರಾಮೀಣ | 0 | 0 | 0 | 0 | 0 | 0 | 0 | 1 | 1 |
| ಒಟ್ಟು | 0 | 0 | 0 | 0 | 1 | 0 | 0 | 1 | 2 |

**ಕಾರ್ಮಿಕ ಕಲ್ಯಾಣಾಧಿಕಾರಿ (GMPHಹಿಂಬಾಕಿ-ಒಂದು ಹುದ್ದೆ)**

| ಮೀಸಲಾತಿ | ಪ. ಜಾ. | ಪ. ಪಂ. | ವರ್ಗ -1 | 2ಎ | 2ಬಿ | 3ಎ | 3ಬಿ | ಸಾ. ಅ. | ಒಟ್ಟು |
|---|---|---|---|---|---|---|---|---|---|
| ಮಾಜಿ ಸೈನಿಕ | 0 | 0 | 0 | 0 | 0 | 0 | 0 | 1 | 1 |
| ಅಂಗವಿಕಲ Low vision | 0 | 0 | 0 | 0 | 0 | 0 | 0 | 1 | 1 |
| ಒಟ್ಟು | 0 | 0 | 0 | 0 | 0 | 0 | 0 | 2 | 2 |

**ಸಹಾಯಕ ಕಾನೂನು ಅಧಿಕಾರಿ**

| ಮೀಸಲಾತಿ | ಪ. ಜಾ. | ಪ. ಪಂ. | ವರ್ಗ -1 | 2ಎ | 2ಬಿ | 3ಎ | 3ಬಿ | ಸಾ. ಅ. | ಒಟ್ಟು |
|---|---|---|---|---|---|---|---|---|---|
| ಮಹಿಳೆ | 1 | 0 | 0 | 1 | 0 | 0 | 0 | 1 | 3 |
| ಗ್ರಾಮೀಣ | 0 | 0 | 0 | 0 | 0 | 0 | 0 | 1 | 1 |
| ಒಟ್ಟು | 1 | 0 | 0 | 1 | 0 | 0 | 0 | 2 | 4 |

*ಸದರಿ ಜಾಹೀರಾತಿನಲ್ಲಿ ನಮೂದಿಸಿರುವ ಹುದ್ದೆಗಳ ಸಂಖ್ಯೆಯನ್ನು ನಿಗದಿಪಡಿಸುವಾಗ ಪ್ರಸ್ತುತ ಕ.ರಾ.ರ.ಸಾ.ನಿಗಮ ಮತ್ತು ವಾ.ಕ.ರ.ಸಾ.ಸಂಸ್ಥೆಗಳಲ್ಲಿ ಖಾಲಿ ಇರುವ 2017-18ನೇ ಸಾಲಿನಲ್ಲಿ ಉದ್ಭವಾಗುವ ಹುದ್ದೆಗಳನ್ನು ಸಹ ಪರಿಗಣಿಸಲಾಗಿದೆ.*

**ಟಿಪ್ಪಣಿ:** 1. Low vision ಅರ್ಹ ವಿಕಲಚೇತನ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ Hearing impaired/Locomotor Disability ವಿಕಲಚೇತನ ಅಭ್ಯರ್ಥಿಗಳು ಆಯ್ಕೆಗೆ ಪರಿಗಣಿಸಲಾಗುವುದು.

2. Hearing impaired ಅರ್ಹ ವಿಕಲಚೇತನ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ Low vision/Locomotor Disability ವಿಕಲಚೇತನ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದು.

3. ಆಯಾ ವರ್ಗದ ಸಮತಳ ಮೀಸಲಾತಿಯ ರಿಕ್ತ ಸ್ಥಾನಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಆಯಾ ವರ್ಗಕ್ಕೆ ಸೇರಿದ ಸಾಮಾನ್ಯ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

■ **ಅರ್ಹತೆಗಳು (ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕ: 31.01.2017 ರಂದಿಗೆ)**

- **1. ಹುದ್ದೆ ಹೆಸರು : ಸಹಾಯಕ ಆಡಳಿತಾಧಿಕಾರಿ (Administrative Officer)**
- **ವಿದ್ಯಾರ್ಹತೆ:** ಪರ್ಸನಲ್ ಮ್ಯಾನೇಜ್‌ಮೆಂಟ್/ಹ್ಯೂಮನ್ ರಿಲೇಷನ್ಸ್ ಸ್ಪೆಷಿಯಲೈಸೇಷನ್‌ನೊಂದಿಗೆ ಎಂಎಸ್‌ಡಬ್ಲ್ಯೂ/ ಎಂ.ಬಿ.ಎ.ನಲ್ಲಿ ಸ್ನಾತಕೋತ್ತರ ಪದವಿ. **(A Master Degree in Social Work/Business Administration with Specialization in Personnel Management/Human relations.)**
- **2. ಹುದ್ದೆ ಹೆಸರು : ಸಹಾಯಕ ಲೆಕ್ಕಾಧಿಕಾರಿ (Asst. Accounts Officer)**
- **ವಿದ್ಯಾರ್ಹತೆ:** ಕಾನೂನು ಮೇರೆಗೆ ಸ್ಥಾಪಿತವಾದ ವಿಶ್ವವಿದ್ಯಾಲಯವೊಂದರಿಂದ ವಾಣಿಜ್ಯ ವಿಷಯದಲ್ಲಿ ಪಡೆದ ಮಾಸ್ಟರ್ ಡಿಗ್ರಿ / ಬಿ.ಕಾಂ. ಜೊತೆ ಫೈನಾನ್ಸ್‌ನಲ್ಲಿ ಎಂಬಿಎನಲ್ಲಿ ಸ್ನಾತಕೋತ್ತರ ಪದವಿ. **(A Master Degree in Commerce/B.Com with MBA in Finance From a University established by Law.)**
- **3. ಹುದ್ದೆ ಹೆಸರು : ಸಹಾಯಕ ಸಂಚಾರ ವ್ಯವಸ್ಥಾಪಕರು (Asst. Traffic Manager)**
- **ವಿದ್ಯಾರ್ಹತೆ:** (ಅ) ಕಾನೂನು ಮೇರೆಗೆ ಸ್ಥಾಪಿತವಾದ ವಿಶ್ವವಿದ್ಯಾಲಯವೊಂದರಿಂದ ಟ್ರಾನ್ಸ್‌ಪೋರ್ಟೇಶನ್ / ಮಾರ್ಕೆಟಿಂಗ್‌ನಲ್ಲಿ ಸ್ನಾತಕೋತ್ತರ ಎಂಬಿಎ/ಪರ್ಸನಲ್ ಮ್ಯಾನೇಜ್‌ಮೆಂಟ್ ಮತ್ತು ಇಂಡಸ್ಟ್ರಿಯಲ್ ರಿಲೇಷನ್ಸ್‌ನಲ್ಲಿ ತಜ್ಞತೆಯೊಂದಿಗೆ ಎಂಎಸ್‌ಡಬ್ಲ್ಯೂನಲ್ಲಿ ಸ್ನಾತಕೋತ್ತರ ಪದವಿ / ಮೆಕ್ಯಾನಿಕಲ್ / ಆಟೋಮೊಬೈಲ್ ಇಂಜಿನಿಯರಿಂಗ್‌ನಲ್ಲಿ ಬಿ.ಇ. ಪದವಿ ಮತ್ತು
  (ಆ) ಭಾರಿ ಸಾಗಾಣಿಕೆ ವಾಹನ ಚಾಲನಾ ಪರವಾನಗಿ ಹೊಂದಿರಬೇಕು ಅಥವಾ ಪರೀಕ್ಷಾರ್ಥ ಅವಧಿ ಮುಗಿಯುವ ಒಳಗೆ ಪಡೆಯತಕ್ಕದ್ದು. ತಪ್ಪಿದಲ್ಲಿ ನೇಮಕಾತಿಯು ರದ್ದಾಗುವುದು.
  **(a) A Post Graduation in MBA in Transportation/ Marketing/MSW-specialization in Personnel Management and Industrial relations/BE in Mechanical/Automobile Engineering from a University established by Law and**
  **(b) Must posses a valid HTV Driving License or must obtain one within the period of probation falling which the appointement stands cancelled.**
- **4. ಹುದ್ದೆ ಹೆಸರು : ಸಹಾಯಕ ತಾಂತ್ರಿಕ ಅಭಿಯಂತರರು (Asst. Mechanical Engineer)**
- **ವಿದ್ಯಾರ್ಹತೆ:** (ಅ) ಕಾನೂನು ಮೇರೆಗೆ ಸ್ಥಾಪಿತವಾದ ವಿಶ್ವವಿದ್ಯಾಲಯವೊಂದರಿಂದ ಪಡೆದ ಆಟೋಮೊಬೈಲ್/ ಮೆಕ್ಯಾನಿಕಲ್ ಇಂಜನಿಯರಿಂಗ್‌ನಲ್ಲಿ ಪದವಿ ಮತ್ತು
  (ಆ) ಭಾರಿ ಸಾಗಾಣಿಕೆ ವಾಹನ ಚಾಲನಾ ಪರವಾನಗಿ ಹೊಂದಿರಬೇಕು ಅಥವಾ ಪರೀಕ್ಷಾರ್ಥ ಅವಧಿ ಮುಗಿಯುವುದರೊಳಗೆ ಪಡೆಯತಕ್ಕದ್ದು. ತಪ್ಪಿದಲ್ಲಿ ಅವರ ನೇಮಕಾತಿಯು ರದ್ದಾಗುವುದು.
  **(a) Must posses a Degree in Automobile/Mechanical Engineering from a University established by Law and**
  **(b) Must posses a valid HTV Driving License or must obtain one within the period of probation falling which the appointement stands cancelled.**
- **5. ಹುದ್ದೆ ಹೆಸರು : ಸಹಾಯಕ ಉಗ್ರಾಣಾಧಿಕಾರಿ (Asst. Stores Officer)**
- **ವಿದ್ಯಾರ್ಹತೆ:** ಯಾವುದಾದರೊಂದು ಪದವಿಯೊಂದಿಗೆ ಮೆಟಿರೀಯಲ್ ಮ್ಯಾನೇಜ್‌ಮೆಂಟ್‌ನಲ್ಲಿ ಪಡೆದ ಪೋಸ್ಟ್ ಗ್ರ್ಯಾಜುಯೇಟ್ ಡಿಪ್ಲೊಮ/ಮೆಟೀರಿಯಲ್ ಮ್ಯಾನೇಜ್‌ಮೆಂಟ್‌ನಲ್ಲಿ ಎಂಬಿಎ ಅಥವಾ ಆಟೋಮೊಬೈಲ್ ಇಂಜಿನಿಯರಿಂಗ್‌ನಲ್ಲಿ ಬಿ.ಇ. ಪದವಿ. **Any graduate with Post Graduate Diploma in Material Management/MBA In Material Management or BE in Automobile Engineering.**
- **6. ಹುದ್ದೆ ಹೆಸರು : ಭದ್ರತಾ ಮತ್ತು ಜಾಗೃತಾಧಿಕಾರಿ (Security and vigilance Officer)**
- **ವಿದ್ಯಾರ್ಹತೆ:** ಕ್ರಿಮಿನಾಲಜಿ/ಸೈಕಾಲಜಿ ವಿಷಯದಲ್ಲಿ ಪೋಸ್ಟ್ ಗ್ರ್ಯಾಜುಯೇಟ್ ಅಥವಾ ಕ್ರಿಮಿನಾಲಜಿ ವಿಷಯದಲ್ಲಿ ಒಂದು ವಿಷಯವನ್ನಾಗಿ ಅಭ್ಯಸಿಸಿ ಪಡೆದ ಎಂಎಸ್‌ಡಬ್ಲ್ಯೂ ಅಥವಾ ಕ್ಯಾಪ್ಟನ್ ದರ್ಜೆಗಿಂತ ಕಡಿಮೆಯಲ್ಲದ ಮಾಜಿ ಸೈನಿಕ ಅಥವಾ ನೇವಿ/ಆರ್ಮಿ ಅಥವಾ ಏರ್‌ಫೋರ್ಸ್‌ನಲ್ಲಿ ತತ್ಸಮಾನ ಗ್ರೇಡ್.
  **Post Graduate in criminology / Psychology or MSW-must have studied Criminology as one of the subjects or An Ex-serviceman of the rank not below Captain or equivalent grade in Navy/Army or Air Force.**
- **7. ಹುದ್ದೆ ಹೆಸರು : ಸಹಾಯಕ ಗಣಕ ವ್ಯವಸ್ಥಾಪಕರು (Asst. System Manager)**
- **ವಿದ್ಯಾರ್ಹತೆ:** ಕಾನೂನು ಮೇರೆಗೆ ಸ್ಥಾಪಿತವಾದ ವಿಶ್ವವಿದ್ಯಾಲಯವೊಂದರಿಂದ ಪಡೆದ ಕಂಪ್ಯೂಟರ್ ಅಪ್ಲಿಕೇಷನ್‌ನಲ್ಲಿ ಮಾಸ್ಟರ್ ಡಿಗ್ರಿ ಅಥವಾ ಬಿ.ಇ., ಇನ್ ಕಂಪ್ಯೂಟರ್ ಸೈನ್ಸ್/ಬಿ.ಇ. ಇನ್ ಇನ್‌ಫರ್ಮೇಷನ್ ಸೈನ್ಸ್.
  **A Master Degree in Computer Application or BE In Computer Science/BE in Information Science from a University established by Law.**
- **8. ಹುದ್ದೆ ಹೆಸರು : ಕಾರ್ಮಿಕ ಕಲ್ಯಾಣಾಧಿಕಾರಿ (Labour adn Welfare Officer)**
- **ವಿದ್ಯಾರ್ಹತೆ:** ಕಾನೂನು ಮೇರೆಗೆ ಸ್ಥಾಪಿತವಾದ ವಿಶ್ವವಿದ್ಯಾಲಯವೊಂದರಿಂದ ಇಂಡಸ್ಟ್ರಿಯಲ್ ರಿಲೇಷನ್ಸ್/ಪರ್ಸನಲ್ ಮ್ಯಾನೇಜ್‌ಮೆಂಟ್/ಲೇಬರ್ ವೆಲ್‌ಫೇರ್‌ನ ಪರಿಣತಿಯೊಂದಿಗೆ ಎಂಎಸ್‌ಡಬ್ಲ್ಯೂ ಪಡೆದ ಪೋಸ್ಟ್ ಗ್ರಾಜುಯೇಷನ್.
  **A post graduation in Sicial Work (MSW) from a University established by law with specialization in Industrial relations/Personnel management/labour Welfare.**
- **9. ಹುದ್ದೆ ಹೆಸರು : ಸಹಾಯಕ ಕಾನೂನು ಅಧಿಕಾರಿ (Asst. Law Officer)**
- **ವಿದ್ಯಾರ್ಹತೆ:** (ಅ) ಕಾನೂನು ಮೇರೆಗೆ ಸ್ಥಾಪಿತವಾದ ವಿಶ್ವವಿದ್ಯಾಲಯವೊಂದರಿಂದ ಪಡೆದ ಕಾನೂನು ಪದವಿ.
  (ಆ) ವಕೀಲರಾಗಿ 2 ವರ್ಷಗಳ ಕಡಿಮೆಯಿಲ್ಲದೆ ಪ್ರಾಕ್ಟೀಸ್ ಮಾಡಿರಲೇಬೇಕು.
  **(a) A Degree in Law from aUniversity established by Law**
  **(b) Must have practiced as an Advocate for not less than two (w) years.**

■ **ವಯೋಮಿತಿ:**

ಅರ್ಜಿಗಳನ್ನು ಸ್ವೀಕರಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ: 31-01-2017 ರಂದಿಗೆ,

ಅ. ಕನಿಷ್ಠ 18 ವರ್ಷಗಳು ಪೂರ್ಣಗೊಂಡಿರಬೇಕು.

ಆ. ಗರಿಷ್ಠ ಈ ಕೆಳಕಾಣಿಸಿದ ವಯಸ್ಸು ಮೀರಿರಬಾರದು.

| ವರ್ಗ | ವಯಸ್ಸು |
|---|---|
| ಸಾಮಾನ್ಯ ವರ್ಗ | 35 ವರ್ಷಗಳು |
| 2ಎ/2ಬಿ/3ಎ.3ಬಿ | 38 ವರ್ಷಗಳು |
| ಪ.ಜಾತಿ/ಪ.ಪಂ./ವರ್ಗ-1 | 40 ವರ್ಷಗಳು |

**3. ದೇಹದಾರ್ಢ್ಯತೆ:**

ಸಹಾಯಕ ಸಂಚಾರ ವ್ಯವಸ್ಥಾಪಿಕ ಹಾಗೂ ಭದ್ರತಾ ಮತ್ತು ಜಾಗೃತಾಧಿಕಾರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಯಸುವ ಅಭ್ಯರ್ಥಿಗಳು ಈ ಕೆಳಕಂಡ ಕನಿಷ್ಠ ದೇಹದಾರ್ಢ್ಯತೆಯನ್ನು ಕಡ್ಡಾಯವಾಗಿ ಹೊಂದಿರಬೇಕು.

| | ಪುರುಷರು | ಮಹಿಳೆಯರು |
|---|---|---|
| ಎತ್ತರ | 163 ಸೆಂ.ಮೀ. | 153 ಸೆಂ.ಮೀ. |
| ತೂಕ | 55 ಕೆ.ಜಿ. | 50 ಕೆ.ಜಿ. |

■ **ನಿಗಧಿತ ಶುಲ್ಕ :**

**1. ಶುಲ್ಕದ ವಿವರ:**

| ವರ್ಗ | ಶುಲ್ಕ (ಪ್ರತಿ ಹುದ್ದೆಗೆ) |
|---|---|
| ಸಾಮಾನ್ಯ, 2ಎ, 2ಬಿ, 3ಎ ಮತ್ತು 3 ಬಿ ವರ್ಗ | ರೂ. 800/- |
| ಪ.ಜಾತಿ, ಪ.ಪಂಗಡ, ವರ್ಗ-1, ಮಾಜಿ ಸೈನಿಕ ಮತ್ತು ಅಶಕ್ತ ಮಾಜಿ ಸೈನಿಕರ ಅವಲಂಬಿತರಿಗೆ | ರೂ. 400/- |

*ವಿಶೇಷ ಸೂಚನೆ: ಒಂದಕ್ಕಿಂತ ಹೆಚ್ಚು ಹುದ್ದೆಗೆ ಅರ್ಜಿ ಸಲ್ಲಿಸಬಯಸುವ ಅಭ್ಯರ್ಥಿಗಳು ಪ್ರತಿ ಹುದ್ದೆಗೆ ಮೇಲ್ಕಾಣಿಸಿದಂತೆ ನಿಗದಿಪಡಿಸಿರುವ ಮೊತ್ತವನ್ನು ಒಗ್ಗೂಡಿಸಿ ಎಲ್ಲಾ ಹುದ್ದೆಗಳಿಗೂ ಸೇರಿದಂತೆ ಒಟ್ಟು ಹಣದ ಮೊತ್ತವನ್ನು ಒಂದೇ ಚಲನ್‌ನಲ್ಲಿ ಪಾವತಿ ಮಾಡಬೇಕು (ಉದಾಹರಣೆಗೆ: ಒಬ್ಬ ಸಾಮಾನ್ಯ ವರ್ಗದ ಅಭ್ಯರ್ಥಿ ಒಂದೇ ಅರ್ಜಿಯಲ್ಲಿ ಮೂರು ಹುದ್ದೆಗಳನ್ನು ಆಯ್ಕೆಮಾಡಿ ಅರ್ಜಿ ಸಲ್ಲಿಸಲು ಇಚ್ಛಿಸಿದಲ್ಲಿ ಪ್ರತಿ ಹುದ್ದೆಗೆ ಪ್ರತ್ಯೇಕ ಅರ್ಜಿ ಶುಲ್ಕವನ್ನು ಒಗ್ಗೂಡಿಸಿ ರೂ. 2400/-ಗಳ ಮತ್ತೊವನ್ನು ಚಲನ್‌ನಲ್ಲಿ ಪಾವತಿಸತಕ್ಕದ್ದು.)*

■ **ಶುಲ್ಕ ಪಾವತಿ ಮಾಡುವ ವಿಧಾನ:**

www.ksrtcjobs.com ನಲ್ಲಿ ON LINE ಮೂಲಕ ಅರ್ಜಿ ಸಲ್ಲಿಸಿದ ಕೂಡಲೇ ಅಭ್ಯರ್ಥಿಯು ಚಲನ್ ಪ್ರತಿಯನ್ನು ಡೌನ್-ಲೋಡ್ ಮಾಡಿಕೊಂಡು ಅರ್ಜಿ ಶುಲ್ಕವನ್ನು ಅಂಚೆ ಕಛೇರಿಯ ಕೆಲಸದ ವೇಳೆಯೊಳಗೆ ಯಾವುದೇ ಎಲೆಕ್ಟ್ರಾನಿಕ್ ಅಂಚೆ ಕಚೇರಿಗಳಲ್ಲಿ (Comuterised Post Offices Only) ಮಾತ್ರ e-Payment ಮೂಲಕ ಪಾವತಿಸಲು ಈಗಾಗಲೇ ಅವಕಾಶ ಕಲ್ಪಿಸಿದ್ದು, ಈ ಸೌಲಭ್ಯದ ಜೊತೆಗೆ Credit Card/Debit Card/ Net Banking ಮೂಲಕವೂ ಸಹ ಸಂದಾಯ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಅರ್ಜಿ ಶುಲ್ಕವನ್ನು ಪಾವತಿಸದೇ ಇರುವ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಬೇರೆ ಯಾವುದೇ ರೀತಿ ಶುಲ್ಕ ಪಾವತಿಸಿದ್ದಲ್ಲಿ ಸದರಿ ಅರ್ಜಿಯನ್ನು ಪರಿಗಣಿಸುವುದಿಲ್ಲ.

■ ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ ಅಥವಾ ಅದನ್ನು ನಡೆಸುವ ಇತರೆ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ. ಶುಲ್ಕವನ್ನು ಸಂದಾಯ ಮಾಡದಿದ್ದಲ್ಲಿ ಅವರ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

■ **ಅರ್ಜಿಯನ್ನು ಸಲ್ಲಿಸುವ ವಿಧಾನ ಮತ್ತು ಕೊನೆಯ ದಿನಾಂಕ:**

ಅ. ಅರ್ಜಿಯನ್ನು ಕಡ್ಡಾಯವಾಗಿ ಆನ್‌ಲೈನ್ ಮುಖಾಂತರವೇ ಕ.ರಾ.ರ.ಸಾ. ನಿಗಮದ ವೆಬ್‌ಸೈಟ್ www.ksrtcjobs.com ಮೂಲಕ ಸಲ್ಲಿಸಬೇಕು.

ಆ. ದಿನಾಂಕ 17.01.2017 ರಿಂದ 31.01.2017 ರವರೆಗೆ ವೆಬ್‌ಸೈಟ್ ತೆರೆದಿರುತ್ತದೆ. ಅರ್ಜಿಗಳನ್ನು ಕೊನೆಯ ದಿನಾಂಕವಾದ 31.01.2017ರ ರಾತ್ರಿ 11:59 ಗಂಟೆಯೊಳಗೆ ಆನ್‌ಲೈನ್‌ನಲ್ಲಿ ಸಲ್ಲಿಸಬಹುದಾಗಿರುತ್ತದೆ.

ಇ. ಅರ್ಜಿ ಶುಲ್ಕ ಪಾವತಿಸಲು ಕೊನೆಯ ದಿನಾಂಕ 02.02.2017ರ ಸಂಜೆ 6.00 ಗಂಟೆಯೊಳಗೆ.

ಈ. ಮೇಲ್ಕಂಡ ನಿಗದಿತ/ಕೊನೆಯ ದಿನಾಂಕ ಮತ್ತು ಸಮಯದ ನಂತರ ಬರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಉ. ಒಂದಕ್ಕಿಂತ ಹೆಚ್ಚು ಹುದ್ದೆಗೆ ಅರ್ಹರಿದ್ದು, ಅರ್ಜಿ ಸಲ್ಲಿಸಬಯಸುವ ಅಭ್ಯರ್ಥಿಗಳು ಒಂದೇ ಅರ್ಜಿಯಲ್ಲಿ ಹುದ್ದೆಗಳನ್ನು ನಮೂದಿಸಿ ಅದಕ್ಕೆ ತಕ್ಕಂತೆ ಅರ್ಜಿ ಶುಲ್ಕ ಪಾವತಿಸಬೇಕು.

ಊ. ಅಭ್ಯರ್ಥಿಗಳು ಸೂಚನೆಗಳನ್ನು ಓದಿ, ಅರ್ಥ ಮಾಡಿಕೊಂಡ ನಂತರ ಅರ್ಜಿಯನ್ನು ಆನ್-ಲೈನ್‌ನಲ್ಲಿ ಭರ್ತಿ ಮಾಡಿ, ಭಾವಚಿತ್ರ ಹಾಗೂ ಸಹಿಯನ್ನು ಅರ್ಜಿಯೊಂದಿಗೆ ಅಪ್-ಲೋಡ್ ಮಾಡಿ ಸಲ್ಲಿಸತಕ್ಕದ್ದು. ಅಪ್-ಲೋಡ್ ಮಾಡಿ ಸಲ್ಲಿಸಿದ ಮುದ್ರಿತ ಅರ್ಜಿ ಹಾಗೂ ಅಂಚೆ ಕಚೇರಿಯಲ್ಲಿ ಪಾವತಿಸಿದ ಅರ್ಜಿ ಶುಲ್ಕದ ಚಲನ್‌ಗಳನ್ನು (ಕ.ರಾ.ರ.ಸಾ.ನಿಗಮ ಹಾಗೂ ಅಭ್ಯರ್ಥಿ ಪ್ರತಿ) ಅಭ್ಯರ್ಥಿಗಳು ತಮ್ಮ ಬಳಿ ಇಟ್ಟುಕೊಂಡು CAT ಪರೀಕ್ಷೆ ಹಾಗೂ ಮೂಲ ದಾಖಲಾತಿಗಳ ಪರಿಶೀಲನಾ ಸಮಯದಲ್ಲಿ ಕ.ರಾ.ರ.ಸಾ.ನಿಗಮದ ಪ್ರತಿಯನ್ನು ಕಡ್ಡಾಯವಾಗಿ ಹಾರುಪಡಿಸುವುದು.

■ **ಆಯ್ಕೆ ವಿಧಾನ:**

1. ಎಲ್ಲಾ ಹುದ್ದೆಗಳಿಗೆ ಆನ್-ಲೈನ್/ಓ.ಎಂ.ಆರ್. ಮೂಲಕ ಸಾಮಾನ್ಯ ಸಾಮರ್ಥ್ಯ ಪರೀಕ್ಷೆ ನಡೆಸಲಾಗುವುದು, ಅಭ್ಯರ್ಥಿಗಳು ಈ ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯಲ್ಲಿ ಪಡೆದಿರುವ ಅಂಕಗಳ ಶೇಕಡ 50ರಷ್ಟನ್ನು ಅವರು ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆಯಲ್ಲಿ ಪಡೆದ ಅಂಕಗಳ ಶೇಕಡ 50ಕ್ಕೆ ಒಗ್ಗೂಡಿಸಿ, ಸದರಿ ಒಟ್ಟು ಶೇಕಡಾವಾರು ಅಂಕಗಳ ಅರ್ಹತೆ ಮತ್ತು ಮೀಸಲಾತಿ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.
   *(ವಿಶೇಷ ಸೂಚನೆ: ಸಹಾಯಕ ಉಗ್ರಾಣಾಧಿಕಾರಿ ಹುದ್ದೆಗೆ, ಪದವಿಯೊಂದಿಗೆ ಮೆರಿಟಿಯಲ್ ಮ್ಯಾನೇಜ್‌ಮೆಂಟ್‌ನಲ್ಲಿ ಪಡೆದ ಪೋಸ್ಟ್ ಗ್ರ್ಯಾಜುಯೇಟ್ ಡಿಪ್ಲೊಮಾ ಹೊಂದಿದ್ದಲ್ಲಿ, ಪದವಿ ಮತ್ತು ಡಿಪ್ಲೊಮಾಗಳ ಒಟ್ಟು ಅಂಕಗಳ ಶೇ. 50ರನ್ನು ಆಯ್ಕೆ ಪರಿಗಣಿಸಲಾಗುವುದು.)*
2. ಸಂಸ್ಥೆ ನಡೆಸುವ ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯಲ್ಲಿ ಕನಿಷ್ಠ 30 ಅಂಕಗಳನ್ನು ಪಡೆದಿದ್ದಲ್ಲಿ ಮಾತ್ರ ಮುಂದಿನ ಆಯ್ಕೆ ಪ್ರಕ್ರಿಯೆಗೆ ಅರ್ಹರಿರುತ್ತಾರೆ. ಕನಿಷ್ಠ 30 ಅಂಕಗಳಿಗಿಂತ ಕಡಿಮೆ ಅಂಕ ಪಡೆದವರು ಆಯ್ಕೆ ಪ್ರಕ್ರಿಯೆಗೆ ಅನರ್ಹರಾಗುತ್ತಾರೆ.
3. ಸದರಿ ಪರೀಕ್ಷೆಯನ್ನು ಅಭ್ಯರ್ಥಿಗಳು ನಮೂದಿಸಿದ ಖಾಯಂ ವಿಳಾಸ ಹಾಗೂ ಪರೀಕ್ಷಾ ಕೇಂದ್ರಗಳ ಲಭ್ಯತೆಯ ಆಧಾರದ ಮೇಲೆ ಪರೀಕ್ಷೆಯನ್ನು ನಡೆಸಲಾಗುವುದು. ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದಾಗ್ಯೂ ಒಂದೇ ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯನ್ನು ನಡೆಸಲಾಗುವುದು.
4. ಮೇಲ್ಕಂಡಂತೆ ಅರ್ಹತೆ ಹಾಗೂ ನೀತಿಯನುಸಾರ 1:2ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ಮೂಲ ದಾಖಲಾತಿಗಳು/ದೈಹಿಕ ದಾರ್ಢ್ಯತೆ ಪರಿಶೀಲನೆಗಾಗಿ ಆಹ್ವಾನಿಸಲಾಗುವುದು. (ಆಯ್ಕೆ ಪ್ರಾಧಿಕಾರದಿಂದ ಯಾವುದೇ ಅಂಕಗಳನ್ನು ನೀಡಲಾಗುವುದಿಲ್ಲ.)
5. ಅಭ್ಯರ್ಥಿಗಳೂ ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸಿದಲ್ಲಿ, ಆಯ್ಕೆಯ ಸಂದರ್ಭದಲ್ಲಿ ಅವರು ಹುದ್ದೆಗೆ ಅರ್ಜಿಯಲ್ಲಿ ಹುದ್ದೆವಾರು ಹೊಂದಿರುವ ಮೆರಿಟ್ ಮತ್ತು ಮೀಸಲಾತಿಯ ಅನುಸಾರ ಆಯ್ಕೆಗೆ ಪರಿಗಣಿಸಲಾಗುವುದು.

■ **ವೇತನ ಶ್ರೇಣಿ :**

ಆಯ್ಕೆಗೊಂಡ ಅಭ್ಯರ್ಥಿಗಳನ್ನು ಒಂದು ವರ್ಷ ತರಬೇತಿ ಅವಧಿ ಒಳಗೊಂಡಂತೆ ಎರಡು ವರ್ಷಗಳ ಕಾಲ ಖಾಯಂ ಪೂರ್ವ ಪರೀಕ್ಷಾರ್ಥ ಸೇವೆಯ ಮೇಲೆ ನಿಯೋಜಿಸಿ ಹುದ್ದೆಯ ಕಾಲಿಕ ವೇತನ ಶ್ರೇಣಿಯನ್ನು ರೂ. 26580-810-29820-940-32640-1090-37000-1220-46760ರಂತೆ ನಿಗದಿಪಡಿಸಲಾಗುವುದು. ಜೊತೆಗೆ ಸಂಸ್ಥೆಯಲ್ಲಿ ಲಭ್ಯವಿರುವ ಇನ್ನಿತರೆ ಸೌಲಭ್ಯಗಳಿಗೆ ಅರ್ಹರಿರುತ್ತಾರೆ.

■ **ದಾಖಲಾತಿಗಳ ವಿವರ:**

ಅಭ್ಯರ್ಥಿಗಳು ಅರ್ಜಿಯಲ್ಲಿ ನಮೂದಿಸಿರುವ ಅರ್ಹತೆ ಹಾಗೂ ಮೀಸಲಾತಿಗಳಿಗೆ ಅನುಗುಣವಾಗಿ ಈ ಕೆಳಕಂಡ ಮೂಲ ದಾಖಲಾತಿಗಳ ಪ್ರಮಾಣಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಲಾಗಿರುವ ಕೊನೆಯ ದಿನಾಂಕವಾದ 31.01.2017ರಂದಿಗೆ ಹೊಂದಿರಬೇಕು ಹಾಗೂ ಸಂಸ್ಥೆಯು ಅವುಗಳನ್ನು ಹಾಜರುಪಡಿಸಲು ಸೂಚಿಸಿದಾಗ ತಪ್ಪದೇ ಅದೇ ದಾಖಲೆಗಳನ್ನು ಹಾಜರುಪಡಿಸತಕ್ಕದ್ದು.

1. ಅರ್ಜಿ ಶುಲ್ಕ ಪಾವತಿ ಮಾಡಿರುವ ಬಗ್ಗೆ ದಾಖಲಾತಿ.
2. ಆಯಾ ಹುದ್ದೆಗೆ ನಿಗಧಿಪಡಿಸಿರುವ ವಿದ್ಯಾರ್ಹತೆಯಲ್ಲಿ ಉತ್ತೀರ್ಣರಾಗಿರುವ ಬಗ್ಗೆ ಅಂಕಪಟ್ಟಿಗಳು ಹಾಗೂ ಪ್ರಮಾಣ ಪತ್ರಗಳು.
3. ಜನ್ಮ ದಿನಾಂಕದ ದಾಖಲೆಗಾಗಿ ಜನ್ಮ ದಿನಾಂಕವುಳ್ಳ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ/ಶಾಲಾ ವರ್ಗಾವಣೆ ಪತ್ರ/ಕ್ಯುಮಿಲೇಟೀವ್ ರೆಕಾರ್ಡ್.
4. ಸೈನಿಕ ಸೇವೆಯಿಂದ ಬಿಡುಗಡೆಯಾಗಿ / ಮುಕ್ತಿ ಹೊಂದಿ ಮಾಜಿ ಸೈನಿಕ ಎಂಬುದಾಗಿ ನಿರ್ಧರಿಸಿರುವ ಬಗ್ಗೆ ಪ್ರಮಾಣಪತ್ರ (ಮಾಜಿ ಸೈನಿಕ ಮೀಸಲಾತಿ ಕೋರಿದ್ದಲ್ಲಿ).
5. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, 2ಎ, 3ಬಿ, 3ಎ ಹಾಗೂ 3ಬಿ ವರ್ಗಗಳ ಮೀಸಲಾತಿಯ ಚಾಲ್ತಿಯಲ್ಲಿರುವ ಪ್ರಮಾಣ ಪತ್ರಗಳು. (ಜಾತಿ/ವರ್ಗಗಳ ಮೀಸಲಾತಿ ಕೋರಿದ್ದಲ್ಲಿ).
6. ನಮೂನೆ-1 ಮತ್ತು ನಮೂನೆ-2ರಲ್ಲಿ ಪಡೆದ ಗ್ರಾಮೀಣ ಅಭ್ಯರ್ಥಿ ಮೀಸಲಾತಿ ಪ್ರಮಾಣ ಪತ್ರ ಪ್ರತಿಗಳು (ಗ್ರಾಮೀಣ ಮೀಸಲಾತಿ ಕೋರಿದ್ದಲ್ಲಿ).
7. ಅಂಗವಿಕಲ ಮೀಸಲಾತಿ ಕೋರಿರುವ ಆಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಅಧಿಕೃತ ಪ್ರಾಧಿಕಾರಸ್ಥರಿಂದ ಪಡೆದ ಸಮರ್ಪಕ ಪ್ರಮಾಣ ಪತ್ರ ಹೊಂದಿರಬೇಕು.
8. ಇಲಾಖೆ ಅಭ್ಯರ್ಥಿಗಳು ಸಂಬಂಧಪಟ್ಟ ನೇಮಕ ಪ್ರಾಧಿಕಾರಸ್ಥರಿಂದ ಪಡೆದ ಸೇವಾ ಪ್ರಮಾಣ ಪತ್ರ. (ಇಲಾಖಾ ಅಭ್ಯರ್ಥಿಯಾಗಿದ್ದಲ್ಲಿ).

■ **ಷರತ್ತು ಮತ್ತು ನಿಬಂಧನೆಗಳು:**

- ಒಬ್ಬ ಅಭ್ಯರ್ಥಿಯು ಒಂದು ಅರ್ಜಿಯನ್ನು ಮಾತ್ರ ಸಲ್ಲಿಸಲು ಅವಕಾಶವಿರುತ್ತದೆ. ಒಂದಕ್ಕಿಂತ ಹೆಚ್ಚು ಹುದ್ದೆಗೆ ಅರ್ಜಿ ಸಲ್ಲಿಸಬಯಸುವ ಅಭ್ಯರ್ಥಿಗಳು ಒಂದೇ ಅರ್ಜಿಯಲ್ಲಿ ಎಲ್ಲಾ ಹುದ್ದೆಗಳನ್ನು ನಮೂದಿಸಿ ಸಲ್ಲಿಸುವುದು.
- ಅರ್ಜಿ ಸಲ್ಲಿಸಿರುವ ಎಲ್ಲಾ ಹುದ್ದೆಗಳಿಗೆ ಒಂದೇ ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯನ್ನು ನಡೆಸಿ ಅದರಲ್ಲಿ ಗಳಿಸಿದ ಅಂಕಗಳನ್ನು ಎಲ್ಲಾ ಹುದ್ದೆಗಳ ಆಯ್ಕೆಗೆ ಪರಿಗಣಿಸಲಾಗುವುದು.
- ಅರ್ಜಿಯಲ್ಲಿ ಆಧಾರ್ ಸಂಖ್ಯೆಯನ್ನು ತಪ್ಪದೇ ನಮೂದಿಸುವುದು. ಆಧಾರ್ ಇಲ್ಲದಿದ್ದಲ್ಲಿ ಮಾತ್ರ ಇತರೆ ಗುರುತಿನ ಚೀಟಿಯ ಐ.ಡಿ. ಸಂಖ್ಯೆಯನ್ನೂ ನಮೂದಿಸುವುದು ಹಾಗೂ ಮೂಲ ಪ್ರತಿಯನ್ನು (ಕೇಂದ್ರ/ರಾಜ್ಯ ಸರ್ಕಾರದಿಂದ ವಿತರಿಸಲಾದ) ನೇಮಕಾತಿಯ ಎಲ್ಲಾ ಹಂತಗಳಲ್ಲಿ ತಪ್ಪದೇ ಕಡ್ಡಾಯವಾಗಿ ಹಾಜರುಪಡಿಸುವುದು.
- ಅಭ್ಯರ್ಥಿಯು ಅರ್ಜಿಯಲ್ಲಿ ನೀಡುವ ವಿಳಾಸ/ಮೊಬೈಲ್ ಸಂಖ್ಯೆ/ ಈ-ಮೇಲ್ ಅಂತಿಮವಾಗಿದ್ದು, ಎಲ್ಲಾ ಪತ್ರವ್ಯವಹಾರಗಳನ್ನು ಅದೇ ವಿಳಾಸ/ಮೊಬೈಲ್ ಸಂಖ್ಯೆ/ಈ-ಮೇಲ್‌ಗೆ ಕಳುಹಿಸಿಕೊಡಲಾಗುವುದು. ನಂತರದಲ್ಲಿ ಬದಲಾವಣೆ ಬಗ್ಗೆ ಯಾವುದೇ ಪತ್ರ ವ್ಯವಹಾರವನ್ನು ಪರಿಗಣಿಸಲಾಗುವುದಿಲ್ಲ.
- ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆಯ ಪರೀಕ್ಷೆಗೆ ಹಾಜರಾಗಿ, ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಫಲಿತಾಂಶ ಪ್ರಕಟವಾಗದ ಪಕ್ಷದಲ್ಲಿ ಅಂತಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವಂತಿಲ್ಲ.
- ಅರ್ಹ ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿಯನ್ನು ಭರ್ತಿ ಮಾಡುವ ಮೊದಲು ವೆಬ್‌ಸೈಟ್‌ನಲ್ಲಿ ನೀಡಿರುವ ವಿವರವಾದ ಜಾಹೀರಾತನ್ನು /ಸೂಚನೆಗಳನ್ನು /ವಿಧಾನವನ್ನು ತಿಳಿದುಕೊಳ್ಳುವುದು.
- ಆಯ್ಕೆಗೊಂಡು ಸೇವೆಯಲ್ಲಿ ಖಾಯಂಗೊಳ್ಳುವ ಅಭ್ಯರ್ಥಿಗಳು ಉಪದಾನ ಪಾವತಿ ಕಾಯ್ದೆ 1972ರನ್ವಯ ಉಪಧನ ಪಡೆಯಲು ಅರ್ಹರಿರುತ್ತಾರೆ.
- ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ಅಥವಾ ಮೇಲ್ದರ್ಜೆ ವಿದ್ಯಾರ್ಹತೆಯಲ್ಲಿ ಕನ್ನಡ ವಿಷಯವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಅಧ್ಯಯನ ಮಾಡದೆ ಇದ್ದಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳು

☞ 10

3

ಊ. ಅಭ್ಯರ್ಥಿಗಳು ಸೂಚನೆಗಳನ್ನು ಓದಿ, ಅರ್ಥ ಮಾಡಿಕೊಂಡ ನಂತರ ಅರ್ಜಿಯನ್ನು ಆನ್-ಲೈನ್‌ನಲ್ಲಿ ಭರ್ತಿ ಮಾಡಿ, ನಿಗದಿತ ನಮೂನೆಯಲ್ಲಿ ಸ್ಕ್ಯಾನ್ ಮಾಡಲಾದ 2 ತಿಂಗಳ ಒಳಗೆ ಪಡೆದ ಭಾವಚಿತ್ರ ಹಾಗೂ ಸಹಿಯನ್ನು ಅರ್ಜಿಯೊಂದಿಗೆ ಅಪ್-ಲೋಡ್ ಮಾಡಿ ಸಲ್ಲಿಸತಕ್ಕದ್ದು. ಅಪ್-ಲೋಡ್ ಮಾಡಿ ಸಲ್ಲಿಸಿದ ಮುದ್ರಿತ ಅರ್ಜಿ ಹಾಗೂ ಅಂಚೆ ಕಚೇರಿಯಲ್ಲಿ ಪಾವತಿಸಿದ ಅರ್ಜಿ ಶುಲ್ಕದ ಚಲನ್‌ಗಳನ್ನು (ಕ.ರಾ.ರ.ಸಾ.ನಿಗಮ ಹಾಗೂ ಅಭ್ಯರ್ಥಿ ಪ್ರತಿ) ಅಭ್ಯರ್ಥಿಗಳು ತಮ್ಮ ಬಳಿ ಇಟ್ಟುಕೊಂಡು CAT ಪರೀಕ್ಷೆ ಹಾಗೂ ಮೂಲ ದಾಖಲಾತಿಗಳ ಪರಿಶೀಲನಾ ಸಮಯದಲ್ಲಿ ಕ.ರಾ.ರ.ಸಾ.ನಿಗಮದ ಪ್ರತಿಯನ್ನು ಕಡ್ಡಾಯವಾಗಿ ಹಾಜರುಪಡಿಸುವುದು.

- **ಆಯ್ಕೆ ವಿಧಾನ:**

1. ಎಲ್ಲಾ ಹುದ್ದೆಗಳಿಗೆ ಆನ್-ಲೈನ್/ಓ.ಎಂ.ಆರ್. ಮೂಲಕ ಸಾಮಾನ್ಯ ಸಾಮರ್ಥ್ಯ ಪರೀಕ್ಷೆ ನಡೆಸಲಾಗುವುದು.,
2. ವಿವಿಧ ಹುದ್ದೆಗಳ ಆಯ್ಕೆಗೆ ಪರಿಗಣಿಸಲಾಗುವ ಅಂತಿಮ ಮೆರಿಟ್ ನಿಯಮದ ವಿವರಗಳು ಈ ಕೆಳಕಾಣಿಸಿದಂತಿರುತ್ತದೆ.

- **ವೇತನ ಶ್ರೇಣಿ :**

ಆಯ್ಕೆಗೊಂಡ ಅಭ್ಯರ್ಥಿಗಳನ್ನು ಒಂದು ವರ್ಷ ತರಬೇತಿ ಅವಧಿ ಒಳಗೊಂಡಂತೆ ಎರಡು ವರ್ಷಗಳ ಕಾಲ ಖಾಯಂ ಪೂರ್ವ ಪರೀಕ್ಷಾರ್ಥ ಸೇವೆಯ ಮೇಲೆ ನಿಯೋಜಿಸಿ ಹುದ್ದೆಯ ಕಾಲಿಕ ವೇತನ ಶ್ರೇಣಿಯನ್ನು ರೂ. 26580-810-29820-940-32640-1090-37000-1220-46760ರಂತೆ ನಿಗದಿಪಡಿಸಲಾಗುವುದು. ಜೊತೆಗೆ ಸಂಸ್ಥೆಯಲ್ಲಿ ಲಭ್ಯವಿರುವ ಇನ್ನಿತರೆ ಸೌಲಭ್ಯಗಳಿಗೆ ಅರ್ಹರಿರುತ್ತಾರೆ.

- **ದಾಖಲಾತಿಗಳ ವಿವರ:**

ಅಭ್ಯರ್ಥಿಗಳು ಅರ್ಜಿಯಲ್ಲಿ ನಮೂದಿಸಿರುವ ಅರ್ಹತೆ ಹಾಗೂ ಮೀಸಲಾತಿಗಳಿಗೆ ಅನುಗುಣವಾಗಿ ಈ ಕೆಳಕಂಡ ಮೂಲ ದಾಖಲಾತಿಗಳ ಪ್ರಮಾಣಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಲಾಗಿರುವ ಕೊನೆಯ ದಿನಾಂಕವಾದ 31.01.2017ರಂದಿಗೆ ಹೊಂದಿರಬೇಕು ಹಾಗೂ ಸಂಸ್ಥೆಯು ಅವುಗಳನ್ನು ಹಾಜರುಪಡಿಸಲು ಸೂಚಿಸಿದಾಗ ತಪ್ಪದೇ ಅದೇ ದಾಖಲೆಗಳನ್ನು ಹಾಜರುಪಡಿಸತಕ್ಕದ್ದು.

1. ಅರ್ಜಿ ಶುಲ್ಕ ಪಾವತಿ ಮಾಡಿರುವ ಬಗ್ಗೆ ದಾಖಲಾತಿ.
2. ಆಯಾ ಹುದ್ದೆಗೆ ನಿಗಧಿಪಡಿಸಿರುವ ವಿದ್ಯಾರ್ಹತೆಯಲ್ಲಿ ಉತ್ತೀರ್ಣರಾಗಿರುವ ಬಗ್ಗೆ ಅಂಕಪಟ್ಟಿಗಳು ಹಾಗೂ ಪ್ರಮಾಣ ಪತ್ರಗಳು.
3. ಜನ್ಮ ದಿನಾಂಕದ ದಾಖಲೆಗಾಗಿ ಜನ್ಮ ದಿನಾಂಕವುಳ್ಳ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ/ಶಾಲಾ ವರ್ಗಾವಣೆ ಪತ್ರ/ಕ್ಯುಮಿಲೇಟೀವ್ ರೆಕಾರ್ಡ್.
4. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, 2ಎ ಹಾಗೂ 2 ಬಿ ವರ್ಗಗಳ ಮೀಸಲಾತಿಯ ಚಾಲ್ತಿಯಲ್ಲಿರುವ ಪ್ರಮಾಣ ಪತ್ರಗಳು. (ಜಾತಿ/ವರ್ಗಗಳ ಮೀಸಲಾತಿ ಕೋರಿದ್ದಲ್ಲಿ).
5. ನಮೂನೆ-1 ಮತ್ತು ನಮೂನೆ-2ರಲ್ಲಿ ಪಡೆದ ಗ್ರಾಮೀಣ ಅಭ್ಯರ್ಥಿ ಮೀಸಲಾತಿ ಪ್ರಮಾಣ ಪತ್ರ ಪ್ರತಿಗಳು (ಗ್ರಾಮೀಣ ಮೀಸಲಾತಿ ಕೋರಿದ್ದಲ್ಲಿ).
6. ಇಲಾಖಾ ಅಭ್ಯರ್ಥಿಗಳು ಸಂಬಂಧಪಟ್ಟ ನೇಮಕ ಪ್ರಾಧಿಕಾರದಿಂದ ಪಡೆದ ಸೇವಾ ಪ್ರಮಾಣ ಪತ್ರ. (ಇಲಾಖಾ ಅಭ್ಯರ್ಥಿಯಾಗಿದ್ದಲ್ಲಿ).

- **ಷರತ್ತು ಮತ್ತು ನಿಬಂಧನೆಗಳು:**
- ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಸಲ್ಲಿಸುವ ಅರ್ಜಿಯಲ್ಲಿ ನೀಡಿರುವ ಮಾಹಿತಿಯನ್ನಾಧರಿಸಿ ಸಾಮಾನ್ಯ ಸಾಮರ್ಥ್ಯ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡಲಾಗುವುದು. ನಿಗಮದ ವೆಬ್‌ಸೈಟ್ www.ksrtcjobs.com ನಲ್ಲಿ ನಂತರ ತಿಳಿಸಲಾಗುವ ದಿನಾಂಕಗಳಲ್ಲಿ ರವೇಸ ಪತ್ರದ ದ್ವಿಪ್ರತಿಯನ್ನು ಡೌನ್‌ಲೋಡ ಮಾಡಿಕೊಂಡು ಅದರಲ್ಲಿ ತಿಳಿಸಲಾಗುವ ನಿರ್ದೇಶನಗಳನ್ನು ಕಡ್ಡಾಯವಾಗಿ ಪಾಲಿಸುವುದು.
- ಅಭ್ಯರ್ಥಿಯು, ಪರೀಕ್ಷೆಯನ್ನು ಕನ್ನಡ ಅಥವಾ ಆಂಗ್ಲ ಮಾಧ್ಯಮದಲ್ಲಿ ಮಾತ್ರ ಬರೆಯಲು ಅವಕಾಶವಿದ್ದು, ಪರೀಕ್ಷೆ ಬರೆಯುವ ಭಾಷಾ ಮಾಧ್ಯಮ ಅಂತಿಮವಾಗಿದ್ದು ಯಾವುದೇ ಕಾರಣಕ್ಕೂ ಬದಲಾವಣೆ ಮಾಡಲು ಅವಕಾಶ ಇರುವುದಿಲ್ಲ, ಆದುದರಿಂದ ಪರೀಕ್ಷೆ ಬರೆಯುವ ಭಾಷಾ ಮಾಧ್ಯಮ ಸ್ಪಷ್ಟವಾಗಿ ಅರ್ಜಿಯಲ್ಲಿ ತಿಳಿಸುವುದು.
- ಅಭ್ಯರ್ಥಿಗಳು ನಿಗಮದ ವೆಬ್‌ಸೈಟ್ www.ksrtcjobs.comನಲ್ಲಿ ಆಗಿಂದಾಗ್ಗೆ ನೀಡುವ ಸೂಚನೆಗಳನ್ನು ಗಮನಿಸತಕ್ಕದ್ದು.
- **ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ 31.01.2017ರ ರಾತ್ರಿ 11:59 ಗಂಟೆಯವರೆಗೆ.**
- **ಅರ್ಜಿ ಶುಲ್ಕ ಪಾವತಿಸಲು ಕೊನೆಯ ದಿನಾಂಕ 02.02.2017ರ ಸಂಜೆ 6:00 ಗಂಟೆಯವರೆಗೆ.**


ಒಂದೇ ಕರೆಯಲ್ಲಿ ಕ್ಷಣದಲ್ಲೇ ಪರಿಹಾರ



ಓಂ ಶ್ರೀಕ್ಷೇತ್ರ ಧರ್ಮಸ್ಥಳ ಮಂಜುನಾಥಸ್ವಾಮಿ ಜ್ಯೋತಿಷ್ಯ ಭವನ

ನಿಮ್ಮಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ

ಉಚಿತ ಭವಿಷ್ಯ ಖಚಿತ ಪರಿಹಾರ.

ನಿಮ್ಮ ಕಷ್ಟ ಕಾರ್ಪಣ್ಯಗಳ ನಿವಾರಿಸುವ ಏಕೈಕ ಜ್ಯೋತಿಷ್ಯರು ತುಳುನಾಡಿನ ಹಿರಿಯ ಬ್ರಾಹ್ಮಣ ಗುರುಗಳಾದ

ಶ್ರೀ ವಿಶ್ವರೂಪ ಆಚಾರ್ಯರು

ಮೊ.: 9686122910

(ಶ್ರೀಕ್ಷೇತ್ರ ಧರ್ಮಸ್ಥಳ)

(ಜಾಹೀರಾತು)

100% JOB GUARANTY ಕನ್ಸಲ್‌ಟೆನ್ಸಿ ಅಲ್ಲ

ಮೆಟ್ರೋ ಸಿಟಿ ಬೆಂಗಳೂರಿನ ಪ್ರತಿಷ್ಠಿತ LG ಕಂಪನಿಯ ವಿವಿಧ ಬ್ರಾಂಚ್‌ಗಳಿಗೆ ಕಂಪನಿ ವಾರ್ಷಿಕೋತ್ಸವದ ಪ್ರಯುಕ್ತ 745 ಪರ್ಮನೆಂಟ್ ಪೋಸ್ಟ್‌ಗಳಿಗೆ ಯುವ ಆಸಕ್ತ ಅಭ್ಯರ್ಥಿಗಳನ್ನು ಭರ್ತಿ ಮಾಡಿಕೊಳ್ಳಲಾಗುತ್ತಿದೆ. ಯಾವುದೇ ಸಂದರ್ಶನವಿಲ್ಲದೆ ಬಂದ ದಿನವೇ ನೇರ ನೇಮಕಾತಿ ಹಾಗೂ ಬಂದ ದಿನವೇ ಉಚಿತ ವಸತಿ.

ಯಾವುದೇ ವಿದ್ಯಾರ್ಹತೆ: SSLC, PUC, ITI, JOC, Degree, Diplomo Pass / Fail.

ತಿಂಗಳಿಗೆ ರೂ. 22,000/- ರಿಂದ ರೂ. 28,500/-ಗಳ ವರೆಗೆ

(ಕನ್ನಡ ಬಲ್ಲವರಿಗೆ ಹೆಚ್ಚಿನ ಆದ್ಯತೆ) : ಇಂದೇ ಕರೆ ಮಾಡಿ ಹೆಸರು ನೊಂದಾಯಿಸಿಕೊಳ್ಳಿ:

ಶೀತಲ್ 8550837135 7353935355

(ಜಾಹೀರಾತು)


# 550 ಪಶುವೈದ್ಯರ ನೇಮಕಕ್ಕೆ ನಿರ್ಧಾರ

ಪಶುಸಂಗೋಪನಾ ಇಲಾಖೆಯಿಂದ ನೇರ ನೇಮಕಾತಿ ಮೂಲಕ 550 ಪಶು ವೈದ್ಯರನ್ನು ನೇಮಿಸಿಕೊಳ್ಳಲು ರಾಜ್ಯ ಸಚಿವ ಸಂಪುಟ ತೀರ್ಮಾನಿಸಿದೆ. ಒಂದೇ ಹಂತದಲ್ಲಿ ಎಲ್ಲ 550 ಹುದ್ದೆಗಳನ್ನು ಪಶು ವೈದ್ಯಕೀಯ ಪದವಿ ಕೋರ್ಸ್‌ಗಳ ಅಂಕ ಆಧರಿಸಿ ನೇಮಕ ಮಾಡಿಕೊಳ್ಳಲಾಗುತ್ತದೆ.

ಕಳೆದ ಬಾರಿ ಕೆಪಿಎಸ್‌ಸಿ ಮೂಲಕ ನೇಮಕ ಪ್ರಕ್ರಿಯೆ ಮಾಡಿದ್ದರೂ ನಿರೀಕ್ಷಿತ ಹುದ್ದೆಗಳು ಭರ್ತಿಯಾಗಿರಲಿಲ್ಲ. ಈ ಹಿನ್ನೆಲೆಯಲ್ಲಿ ನೇರ ನೇಮಕಾತಿಗೆ ಅವಕಾಶ ನೀಡಲಾಗಿದೆ. ಪ್ರಸಕ್ತ ವರ್ಷದಲ್ಲಿಯೇ ನೇಮಕ ಪ್ರಕ್ರಿಯೆ ಮುಗಿಯಲಿದೆ ಎಂದು ಕಾನೂನು ಸಚಿವ ಟಿ.ಬಿ.ಜಯಚಂದ್ರ ವಿಧಾನಸೌಧದಲ್ಲಿ ತಿಳಿಸಿದ್ದಾರೆ.

# ವಾಯುವ್ಯ ರೈಲ್ವೆ

## 388 ಅಪ್ರೆಂಟಿಸ್ ಷಿಪ್ ತರಬೇತಿಗೆ ಅರ್ಜಿ

ವಾಯುವ್ಯ ರೈಲ್ವೆ ವಿಭಾಗದಲ್ಲಿ ಅಪ್ರೆಂಟಿಸ್‌ಷಿಪ್ ತರಬೇತಿ ನೀಡಲಾಗುತ್ತಿದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ರೈಲ್ವೆ ಇಲಾಖೆಯ ಕೈಗಾರಿಕಾ ಘಟಕಗಳಿರುವ ಅಜ್ಮೀರ್, ಬಿಕಾನೇರ್, ಜೈಪುರ ಮತ್ತು ಜೋಧಪುರದಲ್ಲಿ ತರಬೇತಿ ನೀಡಲಾಗುತ್ತದೆ.

- **ಒಟ್ಟು ಹುದ್ದೆಗಳು: 388**
- **ಹುದ್ದೆಗಳು:**
- ಫಿಟ್ಟರ್, ಡಿಎಸ್‌ಎಸ್‌ಎಲ್ ಮೆಕಾನಿಕ್, ಎಲೆಕ್ಟ್ರಿಷಿಯನ್, ವೆಲ್ಡರ್, ಪೇಂಟರ್, ಟರ್ನರ್, ವೈರ್‌ಮನ್, ಮಷಿನಿಸ್ಟ್
- **ವಿಭಾಗವಾರು ಖಾಲಿ ಹುದ್ದೆಗಳು:**
- ಅಜ್ಮೀರ್ - 163
- ಬಿಕಾನೇರ - 86
- ಜೈಪುರ - 28
- ಜೋಧಪುರ - 111
- **ಸ್ಟೈಫಂಡ್:**

ಕೇಂದ್ರ ಸರ್ಕಾರದ ನಿಯಮಾನುಸಾರ.

- **ವಯೋಮಿತಿ:**

ಕನಿಷ್ಠ 18 ರಿಂದ ಗರಿಷ್ಠ 24 ವರ್ಷ. ಒಬಿಸಿ ಅಭ್ಯರ್ಥಿಗಳಿಗೆ 3 ವರ್ಷ. ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷಗಳ ಮತ್ತು ಅಂಗವಿಕಲ ಅಭ್ಯರ್ಥಿಗಳಿಗೆ ಹೆಚ್ಚುವರಿ 10 ವರ್ಷ ವಯೋಸಡಿಲಿಕೆ ಇದೆ.

- **ವಿದ್ಯಾರ್ಹತೆ:**

ಮೆಟ್ರಿಕ್ಯುಲೇಷನ್ / ತತ್ಸಮಾನ ಜತೆಗೆ ಆಯಾ ವಿಭಾಗಗಳಿಗೆ ಅನುಗುಣವಾಗಿ ಐಟಿಐ ಅರ್ಹತೆ.

- **ಅರ್ಜಿ ಸಲ್ಲಿಸುವ ವಿಧಾನ:**

ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದ್ದು, ರುಜು ಮತ್ತು ಇತ್ತೀಚಿನ ಭಾವಚಿತ್ರವನ್ನು ಅಪ್‌ಲೋಡ್ ಮಾಡಬೇಕು. ಅರ್ಜಿ ಶುಲ್ಕ ರೂ. 100 (ಎಸ್‌ಸಿ/ಎಸ್‌ಟಿ/ಮಹಿಳಾ/ಅಂಗವಿಕಲ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ ಇದೆ).

- **ನೇಮಕಾತಿ ವಿಧಾನ:**

ವಿದ್ಯಾರ್ಹತೆಯಲ್ಲಿ (10+ಐಟಿಐನ್ನು 50:50 ಅನುಪಾತದಲ್ಲಿ ಪರಿಗಣಿಸಲಾಗುತ್ತದೆ) ಪಡೆದ ಅಂಕಗಳನ್ನು ಆಧರಿಸಿ, ಕೌಶಲ ಪರೀಕ್ಷೆ/ ವಿಭಾಗ ಪರೀಕ್ಷೆ/ ಸಂದರ್ಶನ (ದಾಖಲಾತಿ ಪರಿಶೀಲನೆ) ನಡೆಸಿ ನೇಮಕಾತಿ ಮಾಡಿಕೊಳ್ಳಲಾಗುತ್ತದೆ.

- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 29-1-2017.**

ವೆಬ್‌ಸೈಟ್: www.rrcjaipur.in

9

ನಿಗಮದ ವತಿಯಿಂದ ನಡೆಸಲಾಗುವ ಕನ್ನಡ ಭಾಷಾ ಜ್ಞಾನ ಪರೀಕ್ಷೆಯಲ್ಲಿ ಒಂದೇ ಅವಕಾಶದಲ್ಲಿ ಉತ್ತೀರ್ಣರಾಗಬೇಕು ಇಲ್ಲದಿದ್ದಲ್ಲಿ ಅವರ ಆಯ್ಕೆಯನ್ನು ರದ್ದುಗೊಳಿಸಲಾಗುವುದು.

- ಆಯ್ಕೆ ಹೊಂದಿದ ಅಭ್ಯರ್ಥಿಯು ಸಾರ್ವಜನಿಕ ಉದ್ದಿಮೆ ಅಥವಾ ಕರ್ನಾಟಕ ಸರ್ಕಾರ ಅಥವಾ ಕೇಂದ್ರ ಸರ್ಕಾರದಲ್ಲಿ ಕೆಲಸ ನಿರ್ವಹಿಸುತ್ತಿದ್ದಲ್ಲಿ ಅಂತಹ ಅಭ್ಯರ್ಥಿಯು ಸೂಕ್ತ ಪ್ರಾಧಿಕಾರದಿಂದ ಆಕ್ಷೇಪಣೆ ಇಲ್ಲವೆಂಬ ಪತ್ರವನ್ನು (ಎನ್‌ಒಸಿ) ಹುದ್ದೆಗೆ ವರದಿ ಮಾಡಿಕೊಳ್ಳುವಾಗ ಹಾಜರುಪಡಿಸತಕ್ಕದ್ದು.
- ಆಯ್ಕೆಗೆ ಸಂಬಂಧಿಸಿದಂತೆ ಅಭ್ಯರ್ಥಿಯು ಯಾವುದೇ ವಿಧವಾದ ಪ್ರಚಾರ ಮಾಡುವ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಲ್ಲಿ ಯಾವ ಮುನ್ಸೂಚನೆ ನೀಡದೆ ಅವರನ್ನು ಆಯ್ಕೆಗೆ ಅನರ್ಹಗೊಳಿಸಲಾಗುವುದು.
- ನೇಮಕಾತಿ ಪ್ರಕ್ರಿಯೆಗಳ ಬಗ್ಗೆ ಅಭ್ಯರ್ಥಿಗಳಿಂದ ಯಾವುದೇ ರೀತಿಯ ಪತ್ರ ವ್ಯವಹಾರ ಅಥವಾ ವಿಚಾರಣೆಗಳಿಗೆ ಆಸ್ಪದವಿರುವುದಿಲ್ಲ, ನೇಮಕಾತಿಯ ವಿವಿಧ ಹಂತಗಳಿಗೆ ಸಂಬಂಧಿಸಿದ ಎಲ್ಲಾ ವಿವರಗಳನ್ನು ಸಂಸ್ಥೆಯ ವೆಬ್‌ಸೈಟ್ www.ksrtcjobs.com ನಲ್ಲಿ ನೀಡಲಾಗಿರುತ್ತದೆ.
- ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಸಲ್ಲಿಸುವ ಅರ್ಜಿಯಲ್ಲಿ ನೀಡಿರುವ ಮಾಹಿತಿಯನ್ನಾಧರಿಸಿ ಸಾಮಾನ್ಯ ಸಾಮರ್ಥ್ಯ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡಲಾಗುವುದು. ನಿಗಮದ ವೆಬ್‌ಸೈಟ್ www.ksrtcjobs.com ನಲ್ಲಿ ನಂತರ ತಿಳಿಸಲಾಗುವ ದಿನಾಂಕಗಳಲ್ಲಿ ಪ್ರವೇಶ ಪತ್ರದ ದ್ವಿಪ್ರತಿಯನ್ನು ಡೌನ್‌ಲೋಡ್ ಮಾಡಿಕೊಂಡು ಅದರಲ್ಲಿ ತಿಳಿಸಲಾಗುವ ನಿರ್ದೇಶನಗಳನ್ನು ಕಡ್ಡಾಯವಾಗಿ ಪಾಲಿಸುವುದು.
- ಅಭ್ಯರ್ಥಿಯು, ಪರೀಕ್ಷೆಯನ್ನು ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಮಾತ್ರ ಬರೆಯಲು ಅವಕಾಶವಿದ್ದು, ಪರೀಕ್ಷೆ ಬರೆಯುವ ಭಾಷಾ ಮಾಧ್ಯಮ ಅಂತಿಮವಾಗಿದ್ದು ಯಾವುದೇ ಕಾರಣಕ್ಕೂ ಬದಲಾವಣೆ ಮಾಡಲು ಅವಕಾಶ ಇರುವುದಿಲ್ಲ. ಆದುದರಿಂದ ಪರೀಕ್ಷೆ ಬರೆಯುವ ಭಾಷಾ ಮಾಧ್ಯಮ ಸ್ಪಷ್ಟವಾಗಿ ಅರ್ಜಿಯಲ್ಲಿ ತಿಳಿಸುವುದು.
- ಅಭ್ಯರ್ಥಿಗಳು ನಿಗಮದ ವೆಬ್‌ಸೈಟ್ www.ksrtcjobs.comನಲ್ಲಿ ಆಗಿಂದಾಗ್ಗೆ ನೀಡುವ ಸೂಚನೆಗಳನ್ನು ಗಮನಿಸತಕ್ಕದ್ದು.
- **ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ 31.01.2017ರ ರಾತ್ರಿ 11:59 ಗಂಟೆಯವರೆಗೆ.**
- **ಅರ್ಜಿ ಶುಲ್ಕ ಪಾವತಿಸಲು ಕೊನೆಯ ದಿನಾಂಕ 02.02.2017ರ ಸಂಜೆ 6:00 ಗಂಟೆಯವರೆಗೆ.**

ದಿನಾಂಕ 15-1-2017ರಂದು ನಡೆದ ಅರ್ಹತಾ ಪರೀಕ್ಷೆಯ ಕನ್ನಡ ಮಾಧ್ಯಮದ ಪ್ರಥಮ ಹಾಗೂ ದ್ವಿತೀಯ ಪತ್ರಿಕೆಗಳ

# TET KEY ANSWERS

ಇಲಾಖೆ ಪ್ರಕಟಿಸಿದ ಕೀ ಉತ್ತರಗಳು

## ಪ್ರಥಮ ಪತ್ರಿಕೆ (1ರಿಂದ 5ನೇ ತರಗತಿ)

### PART - I
### Language - I KANNADA

ಸೂಚನೆ: ಕೆಳಗಿನ ಪದ್ಯವನ್ನು ಓದಿ, 1 ರಿಂದ 7ರವರೆಗಿನ ಪ್ರಶ್ನೆಗಳಿಎಗ ಉತ್ತರಿಸಿ:

ಉದರ ವೈರಾಗ್ಯವಿದು ನಮ್ಮ
ಪದುಮನಾಭನಲಿ ಲೇಶ ಬಕುತಿಯಿಲ್ಲ ||ಪಲ್ಲವಿ||
ಉದಯ ಕಾಲದಲೆದ್ದು ಗಡಗಡ ನಡುಗುತ
ನದಿಯೊಳು ಮಿಂದೆವೆಂದು ಹೇಳುತಲಿ ||
ಮದಮತ್ಸರ ಮೋಹ ಒಳಗೆ ತುಂಬಿಟ್ಟುಕೊಂಡು
ಬದಿಯಲ್ಲಿದ್ದವರಿಗಾಶ್ಚರ್ಯ ತೋರುವುದು || 1
ಕಂಚುಗಾರರಾ ಅಂಗಡಿಯಂದದಿ
ಕಂಚು ಹಿತ್ತಾಳೆಯ ಪ್ರತಿಮೆಯ ನೆರಹಿ ||
ಮಿಂಚಲೆನುತೆ ಬಹು ಜ್ಯೋತಿಗಳನೆ ಹಚ್ಚಿ
ವಂಚನೆಯಲಿ ಘನಪೂಜೆ ಮಾಡುವುದು || 2
ಕರದೊಳು ಜಪಮಣಿ ಬಾಯೊಳು ಮಂತ್ರವು
ಅರಿವೆಯ ಮುಸುಕನು ಮೋರೆಗೆ ಹಾಕಿ ||
ಪರಸತಿ ಪರಧನಕಾಗಿ ಚಿಂತಿಸುತೆ
ಪರಮ ವೈರಾಗ್ಯದ ಮೂರ್ತಿಯೆನಿಸುವುದು || 3
ಬೂಟಕತನದಲಿ ಬಹಳ ಬಕುತಿ ಮಾಡಿ
ನೋಟಕೆ ಇವನಿಗೆ ಸರಿಯಿಲ್ಲೆನಿಸಿ ।
ನಾಟಕ ಸ್ತ್ರೀಯಂತೆ ಬಯಲ ಡಂಬವ ತೋರೆ
ಊಟದ ಮಾರ್ಗದ ಜ್ಞಾನವಿದಲ್ಲದೆ || 4
ನಾನು ಎಂಬುದ ಬಿಡದ ಅಜ್ಞಾನಿಗಳೊಡಗೂಡಿ
ಏನೆಲ್ಲಕೆ ದೇವಪ್ರೇರಣೆಯೆಂದು ||
ಧ್ಯಾನಿಸಿ ಮೌನದಿ ಪುರಂದರ ವಿಠಲನ
ಕಾಣದೆ ಮಾಡಿದ ಕಾರ್ಯಗಳೆಲ್ಲವು || 5

1. ಡಾಂಭಿಕ ಭಕ್ತನು ತನ್ನಲ್ಲಿ ತುಂಬಿಕೊಂಡಿರುವುದು
   1. ಅಹಂಕಾರ ಮತ್ತು ಮೋಹ
   2. ಪ್ರೀತಿ, ವಿಶ್ವಾಸ ಮತ್ತು ಸಹಕಾರ
   3. ಪರೋಪಕಾರ ಗುಣ ಮತ್ತು ಸಾತ್ವಿಕ ಗುಣ
   4. ತ್ಯಾಗಮಯ ಲಕ್ಷಣ
2. ಪ್ರತಿಮೆ ಹೊಳೆಯುವಂತೆ ಮಾಡಲು ಡಾಂಭಿಕ ಭಕ್ತನು ಮಾಡುವ ಪರಿ ಇದು
   1. ಭಕ್ತಿ - ಭಾವದಿಂದ ಪೂಜಿಸುವುದು
   2. ಪ್ರತಿನಿತ್ಯ ಪ್ರತಿಮೆಯನ್ನು ತೊಳೆಯುವುದು
   3. ಅನೇಕ ದೀಪಗಳನ್ನು ಹಚ್ಚುವುದು
   4. ಭಕ್ತಿ-ಭಾವದಿಂದ ಕೈ ಮುಗಿಯುವುದು
3. ಮುಸುಕು ಧರಿಸಿಕೊಂಡು ಡಾಂಭಿಕ ಭಕ್ತನು ಏನನ್ನು ಚಿಂತಿಸುವನು ?
   1. ಪರಸ್ತ್ರೀಯರ ಸಂಗದಿಂದ ಆನಂದ ಹೊಂದುವುದು
   2. ಅನ್ಯಸ್ತ್ರೀಯರು, ಅನ್ಯರ ಹಣಕ್ಕಾಗಿ
   3. ಸ್ತ್ರೀಯರ ಸಹವಾಸದಿಂದ ದೂರ ಉಳಿಯುವುದು
   4. ತಾನೊಬ್ಬ ಸತ್ಯವಂತನಂತೆ ನಟಿಸುವುದು
4. ಡಾಂಭಿಕ ಭಕ್ತನು ಬಯಲು ಡಂಬವ ತೋರಿಸುವ ಲಕ್ಷಣವಿದು
   1. ಭಕ್ತಿ-ಭಾವದಿಂದ ನೃತ್ಯ ಮಾಡುವುದು
   2. ನಟನೆಯಲ್ಲಿ ತನ್ನನ್ನು ಮೀರಿಸುವವರಿಲ್ಲವೆಂದು ಹೆಮ್ಮೆ ಪಡುವುದು
   3. ಅನ್ಯರಿಗಿಂತಲೂ ತಾನೊಬ್ಬ ಉತ್ತಮ ನಟನಂತೆ ನಟಿಸುವುದು
   4. ಬಯಲು ರಂಗಮಂದಿರದಲ್ಲಿ ನಟಿಸುವ ಮಹಿಳೆಯಂತೆ ಕಾಣುವುದು.
5. ಡಾಂಭಿಕ ಭಕ್ತನು ಮಾಡುವ ಪೂಜೆ ಹೀಗಿರುತ್ತದೆ.
   1. ಪ್ರತಿನಿತ್ಯ ದೇವರ ಪೂಜೆ ಮಾಡುವುದು
   2. ಬಕ್ತಿ-ಭಾವದಿಂದ ನಮಸ್ಕರಿಸುವುದು
   3. ಮೋಸದಿಂದ ವಿಶೇಷ ಪೂಜೆ ನೆರವೇರಿಸುವುದು
   4. ಶುದ್ಧ ಮನಸ್ಸಿನಿಂದ ಪೂಜೆ ಮಾಡುವುದು.
6. 'ಆಶ್ಚರ್ಯ' ಪದದ ತದ್ಭವ ರೂಪ
   1. ಆನಂದ 2. ಅದ್ಭುತ 3. ಅಚ್ಚರಿ 4. ಐಶ್ವರ್ಯ
7. ಲೋಹವನ್ನು ಮಾರುವವನು ಹರಡಿಕೊಂಡಿರುವ ವಸ್ತುಗಳಿವು
   1. ಕಬ್ಬಿಣದ ದೀಪಗಳನ್ನು ಹರಡಿಕೊಂಡಿರುವುದು
   2. ಕಬ್ಬಿಣದ ಆಯುಧಗಳನ್ನು ನೇತು ಹಾಕಿರುವುದು
   3. ಕಬ್ಬಿಣ, ಕಂಚಿನ ಮೂರ್ತಿಗಳನ್ನು ನೇತು ಹಾಕಿರುವುದು
   4. ಕಂಚು, ಹಿತ್ತಾಳೆಯ ಮೂರ್ತಿಗಳನ್ನು ಹರಡಿ ಕೊಂಡಿರುವುದು

**ಈ ಕೆಳಗಿನ ಗದ್ಯಭಾಗವನ್ನು (ನಾಟಕ) ಓದಿ, ಪ್ರಶ್ನೆ ಸಂಖ್ಯೆ 8 ರಿಂದ 15ರವರೆಗಿನ ಪ್ರಶ್ನೆಗಳಿಗೆ ಉತ್ತರಿಸಿ:**

ಭರತ : ಹಿರಿಯಣ್ಣ ರಾಮಚಂದ್ರ ಇರುವಾಗ ಭರತ ಹ್ಯಾಗೆ
ಅಯೋಧ್ಯಾದ ಚಕ್ರವರ್ತಿಯಾಗೋದು ಶಕ್ಯ...?
ತಾಯಿಯ ಕುರುಡು ಪ್ರೀತಿ ಏನೋ ಮಾಡಿತು ಅಂತ
ಮಗನೂ ಅದಕ್ಕೆ ಅಸ್ತು ಎಂದರೆ ಭರತ ಭರತನಾಗಿ ಉಳೀಲಿಕ್ಕಿಲ್ಲ....
ಭರತ ಚಕ್ರವರ್ತಿಯಾಗೋದಲ್ಲ ಮುಖ್ಯ....
ಭಾರತ ಭರತನಾಗಿ ಉಳಿಯೋದು ಮುಖ್ಯ...!
(ತಕ್ಷಣ ಪ್ರೇಕ್ಷಕರನ್ನು ನೋಡುತ್ತಾ)
ಲೋಕದಲ್ಲಿ ಅತ್ಯಂತ ಕಷ್ಟಕರವಾದ ಕೆಲಸ ಯಾವುದು ಗೊತ್ತಾ ?
"ನಾವು ನಾವಾಗೇ ಉಳಿಯೋದು "
(ನೇಪಥ್ಯದಲ್ಲಿ ಯಾರೋ ಏನನ್ನೋ ಎಡವಿದ ಸದ್ದು)
ಯಾರು...? ಯಾರವರು...?
(ಮಂಥರೆ ಬರುತ್ತಾಳೆ)
ಓ...! ನೀನು...!?

ಮಂಥರಾ : ನಾನೇ... ನಾನೇ...
ಯಾಕ ಮಗನಾ...?
ಬರಬಾರದಿತ್ತು ಅಂತೀ...?
ನಿಂಗಂತು ನಾವು ಬ್ಯಾಡ
ಹೆತ್ತ ತಾಯಿ ಅಂಬೋಳು ಕಾಲ ಕಸಕ್ಕಿಂತ ಕಡೀ ಆಗ್ಯಾಳಾ...!
ತೊರೀ ದಾಟಿದ ಮ್ಯಾಲೆ ತೆಪ್ಪ ಯಾಕ ಬೇಕು ಹೇಳು...?
ನಿನಗ ನಾವು ಬ್ಯಾಡ
ಆದರ
ನಮಗ ನೀನು ಬೇಕಲ್ಲಪ್ಪಾ... ಏನು ಮಾಡೋದೈತೀ....?
ಬೇರಿನ ಕಾಳಜಿ ಬೀಜಕ್ಕೆ ಇರೋಣಿಲ್ಲ - ಲೋಕಧರ್ಮಾನಾ ಹಂಗಾ...

ಭರತ : ಆಗಿಹೋದದ್ದು ಮತ್ತೆ ಯಾಕೆ ಆಡ್ತೀ ಅಜ್ಜೀ...
ನಿಮಗ ಸರೀ ಅನ್ನಿಸಿದ್ದ ನೀವು ಮಾಡಿದಿರಿ...
ನನಗೆ ಸರಿ ಅನ್ನಿಸಿದ್ದ ನಾನು ಮಾಡಬೇಕು...!

ಮಂಥರಾ : ನಮಗೊಂದು ಸರಿ... ನಿನಗೊಂದು ಸರಿ...
ಇನ್ನೊಬ್ಬರಿಗ ಇನ್ನೊಂದು ಸರೀ...
ಹುಚ್ಚಪ್ಪಾ...!
ಲೋಕದಾಗ ಸರೀ ಅಂಬೋದು ಒಂದೇ ಒಂದು...!
ತಪ್ಪು ಸಾವಿರ ಇರ್ತಾವು...
ಸರಿ ಒಂದೇ...!
ನಾವು ನಾವು ನಮ್ಮ ನಮ್ಮ ಮೂಗಿನ ನ್ಯಾರಕ್ಕೆ ನೋಡತಾ ತಾವು ನೋಡಿದ್ದ ಸರೀ ಅನ್ನತೀವಿ...!
ರಾಜಧರ್ಮ ನಿನಗ ಹೇಳಿಕೊಡೋದೈತೇನು...?
ರಾಜ ನೋಡಬೇಕದ್ದು ಪ್ರಜಾಮಂದಿಗೆ ಯಾವುದು ಸರಿ.. ಪ್ರಜಾಮಂದಿಗೆ
ಯಾವುದು ಸರಿ ಅದಾ ರಾಜಧರ್ಮಕ್ಕೆ ಸರಿ..

ಭರತ : ಪ್ರಜಾಮಂದಿಗೆ ಯಾವುದು ಸರೀ ಅನ್ನೋದನ್ನ
ನಾನು
ನನ್ನಿಂದ
ತಿಳೀಬೇಕು...?!

ಮಂಥರಾ : ತಿಳೀಬೇಕಾದ್ದ ಯಾರು ಯಾರಿಂದ ಬೇಕಾರಾ ತಿಳೀಬೋದು
ನಿನಗೆ ನಿನ್ನ ಮಂತ್ರಿ ಹೇಳದ್ದ ದಾರ್ಯಾಗಿನ ದಾಸಯ್ಯ ಹೇಳಬೋದು...!
ರಾಜನ ವಿರುದ್ಧ ಮಾತಾಡಿದರೆ ಮಂತ್ರೀಗೆ ಮಂತ್ರಿ ಪದವಿ ಹೋದೀತು...
ದಾಸಯ್ಯಂಗೆ ಝಾಡಿಸಿದ್ರೆ ಧೋತ್ರದ ಮ್ಯಾಗಿನ ಧೂಳು ಹೋದೀತು..
ನಂಗ ಏನು ಮಾಡೀನೀನು...?
ಊರು ಉತ್ತರ-ಕಾಡು ಹತ್ತರ

ಭರತ : ಛೀ-ಛೀ-ಛೀ!
ಅಯೋಧ್ಯದ ಸುವರ್ಣ ಸಿಂಹಾಸನದ ಸುತ್ತಾ ಗಿರಕೀ ಹೊಡೀತಿರೋ ಮುಳ್ಳು ದುಂಬಿ ನೀವು...! (ನಕ್ಕು)
ನಿಮಗೆ ಕಾಡು ಹ್ಯಾಗಜ್ಜೀ ಹತ್ತಿರ ಆಗತ್ತೆ ? ಇರಲಿ
ಬೇಗ ಏನು ಹೇಳಬೇಕೋ ಅದನ್ನ ಹೇಳಿ ಮುಗಿಸು...
ಸುಮ್ಮನೆ ಯಾಕೆ ಕೊಂಕಣ ಸುತ್ತುತೀ!

ಮಂಥರಾ : ಏನು ಹೇಳ್ಳಿ ಹೇಳೂ...
ರಾಮಚಂದ್ರನ್ನ ಮತ್ತ ನಾಡಿಗ ಕರೆಯೋಕಾ ಅಂತ ಕಾಡಿಗೆ ನೀನು ಹೊಂಟೀ
ಅಂತ ಊರಮಂದಿ ಎಲ್ಲ ಮಾತಾಡತಾ ಅವರೆ...

ಭರತ : ಹಾ... ಹೋಗ್ತಾ ಇದೀನಿ... ಬಂದ್ರೆ ರಾಮನ ಜೋಡಿ ಊರಿಗೆ ತಿರುಗಿ ಬರ್ತೀನಿ.. ಇಲ್ಲಾ ನಾನೂ ಕಾಡಿನಲ್ಲೇ ವನವಾಸ ಮಾಡುತೀನಿ....!

ಮಂಥರಾ : ಹದಿನಾಕು ವರ್ಷ ವನವಾಸ ಮಾಡ್ತೀನಿ ಅಂತ ನಿಮ್ಮಣ್ಣ ರಾಮ ತನ್ನ ತಂದೆ ಮುಂದೆ ಆಣೆ ಪ್ರತಿಜ್ಞೆ ಮಾಡಿ ಕಾಡಿಗೆ ಹೋಗವ್ನೆ...
ರಾಮಂಗೆ ಒಂದೇ ಮಾತು ಒಂದೇ ಬಾಣ ಅಂತಾರು... ಕೊಟ್ಟ ಮಾತಿಗೆ ಎಂದೂ ತಪ್ಪೋನಲ್ಲ ಅವನು... ಧರ್ಮದ ಹಾದಿ ಬಿಟ್ಟು ಅಧರ್ಮದ ಹಾದಿ ಎಂದೂ ಹಿಡಿಯೋನಲ್ಲ...
(ನಿಟ್ಟುಸಿರು ಬಿಟ್ಟು)

8. ಭರತ, ಭರತನಾಗಿ ಉಳಿಯದೇ ಇರುವುದು ಯಾವಾಗ ?
   1. ತಾಯಿಯ ಕುರುಡು ಪ್ರೀತಿಗೆ ಬಲಿಪಶುವಾದಾಗ
   2. ತಾಯಿಯ ಪ್ರೀತಿಗೆ ಪಾತ್ರನಾದಾಗ
   3. ತಾಯಿಯ ಮಾತು ವಿರೋಧಿಸಿದಾಗ
   4. ತಾಯಿಯ ಸಹನೆ ಪರೀಕ್ಷಿಸಿದಾಗ
9. ಪ್ರಪಮಚದಲ್ಲಿ ಅತ್ಯಂತ ಕಷ್ಟಕರ ಕೆಲಸ
   1. ಎಲ್ಲರನ್ನು ಬಿಟ್ಟು ಏಕಾಂಗಿ ಬಾಳುವುದು
   2. ಎಲ್ಲರೂ ಒಟ್ಟುಗೂಡಿ ಬಾಳುವುದು
   3. ನಾವು, ನಾವಾಗಿಯೇ ಉಳಿಯುವುದು
   4. ನಮ್ಮನ್ನು ಬೇರೆಯವರು ಅರ್ಥಮಾಡಿಕೊಳ್ಳುವುದು
10. 'ಅತ್ಯಂತ' ಈ ಪದ ಒಳಗೊಂಡಿರುವ ಸಂಧಿ ಕ್ರಿಯೆ
    1. ಗುಣ ಸಂಧಿ 2. ಯಣ್ ಸಂಧಿ
    3. ವೃದ್ಧಿ ಸಂಧಿ 4. ಸವರ್ಣದೀರ್ಘ ಸಂಧಿ
11. ಇದು ಭಾವ ಸೂಚಕ ಅವ್ಯಯಕ್ಕೆ ಉದಾಹರಣೆ
    1. ಚೆನ್ನಾಗಿ 2. ದಬದಬ
    3. ಆದ್ದರಿಂದ 4. ಥೂ!
12. ತೊರಿ ದಾಟಿದ ಮೇಲೆ ತೆಪ್ಪ ಯಾಕೆ ಬೇಕು ? - ಇದರ ಅರ್ಥ
    1. ತೊರಿ ದಾಟಲು ತೆಪ್ಪದ ಅವಶ್ಯಕತೆ
    2. ಶ್ರೀಮಂತರು ಬಡವರಿಗೆ ಸಹಾಯ ಮಾಡುವುದು
    3. ಕಷ್ಟದಲ್ಲಿ ಸಹಾಯ ಮಾಡಿದವರನ್ನು ಮರೆತುಬಿಡುವುದು
    4. ಕಷ್ಟದಲ್ಲಿರುವವರನ್ನು ಕಂಡು ಮರುಗುವುದು.
13. 'ರಾಜಧರ್ಮ' ಎಂದು ಕರೆಸಿಕೊಳ್ಳುವುದು
    1. ಪ್ರಜಾಪಾಲಕನಾಗಿ, ಪ್ರಜೆಗಳ ಸೇವೆ ಮಾಡುವುದು
    2. ಮಂತ್ರಿಗಳಿಗೆ ಸಕಲ ವ್ಯವಸ್ಥೆ ಮಾಡಿಕೊಡುವುದು
    3. ರಾಜವಂಶದವರು ನಂಬುವ ಧರ್ಮ
    4. ರಾಜನ ಸಂಬಂಧಿಕರ ಸಮಾಜ ಸೇವೆ
14. ವಿಷಯ ಪ್ರಸ್ತಾವನೆಯ ಸಂದರ್ಭದಲ್ಲಿ ಕೊಂಕಣ ಸುತ್ತುವುದು ಎಂದರೆ
    1. ಹೇಳುವ ವಿಷಯ ನಿಧಾನವಾಗಿ ಹೇಳುವುದು
    2. ವಿಷಯವನ್ನು ನೇರವಾಗಿ ಹೇಳದೆ ಸುತ್ತಿ-ಬಳಸಿ ಮಾತನಾಡುವುದು
    3. ವಿಷಯವನ್ನು ಅವಲಂಬಿಸದೇ ಹೇಳುವುದು
    4. ಆಧಾರಗಳಿಲ್ಲದೇ ಮಾತನಾಡುವುದು
15. ಕಷ್ಟದ ಸಮಯದಲ್ಲಿ ಜೀವಿಸುವಾಗ ಹೋಲಿಕೆ ನೀಡುವ ಪರಿ ಇದು
    1. ಜೀವನದಲ್ಲಿ ಸುಖ-ಶಾಂತಿಯ ಸಮಯ
    2. ಜೀವನದಲ್ಲಿ ಸಂತೋಷವಾಗಿದ್ದೇವೆ
    3. ಜೀವನದಲ್ಲಿ ಇದು ನಮಗೆ ವನವಾಸದ ಸಮಯ
    4. ವ್ಯಕ್ತಿಗತ ಸಮಸ್ಯೆಯನ್ನು ಪರಿಹರಿಸಿಕೊಳ್ಳುವುದು
16. ಇದು ಭಾಷೆಯ ಮೂಲ ಸ್ವರೂಪಕ್ಕೆ ವ್ಯತಿರಿಕ್ತವಾದ ಅಂಶ
    1. ಭಾಷೆಯು ಜೈವಿಕ ಹಾಗೂ ಸಾಮಾಜಿಕ ಪ್ರಭಾವದಿಂದ ರೂಪುಗೊಳ್ಳುತ್ತದೆ
    2. ಭಾಷೆಯು ಅವಶ್ಯಕತೆಗನುಗುಣವಾಗಿ ರೂಪುಗೊಳ್ಳುತ್ತದೆ.
    3. ಭಾಷೆಯು ಸ್ವೀಕೃತ ಮತ್ತು ಉತ್ಪಾದಕ ಗುಣ ಹೊಂದಿದೆ
    4. ಭಾಷೆಯು ದೈವೀಶಕ್ತಿಯನ್ನು ಹೊಂದಿದ್ದು, ಪ್ರತಿಯೊಬ್ಬರೂ ಸಹಜವಾಗಿ ಮಾತನಾಡುವುದಾಗಿದೆ.
17. "ಮಾನವನು ವಸ್ತುಗಳ ಮತ್ತು ಪ್ರಾಣಿ ಪಕ್ಷಿಗಳ ಶಬ್ದಗಳನ್ನು ಅನುಕರಿಸಲು ಮಾಡಿದ ಪ್ರಯತ್ನವೇ ಭಾಷೆ" ಎಂದು ಅಭಿಪ್ರಾಯ ವ್ಯಕ್ತಪಡಿಸಿದವರು
    1. ನಾಯಿರಿ 2. ಭಟ್ಟಾಕಳಂಕ
    3. ಲಿಬ್ನಿಜ್ 4. ದಂಡಿ
18. ಮಗುವಿನ ಭಾಷಾ ಕಲಿಕೆಯಲ್ಲಿ ಇದು ಮೂಲ ಕೌಶಲ
    1. ಬರಹ 2. ಮಾತುಗಾರಿಕೆ
    2. ಆಲೈಸುವಿಕೆ 4. ಓದುಗಾರಿಕೆ
19. 'ಮಾತು' ಎಂದರೆ
    1. ಸುಲಭವಾಗಿ ಎಲ್ಲರಿಗೆ ಅರ್ಥವಾಗುವಂತೆ ಮಾತನಾಡುವುದು
    2. ಜನರೊಂದಿಗೆ ಬೆರೆತು ವ್ಯವಹರಿಸುವುದು
    3. ಪದಗಳು ಮತ್ತು ವಾಕ್ಯಗಳ ರೂಪದಲ್ಲಿ ಪರರಿಗೆ ಅರ್ಥಮಾಡಿಸುವುದು
    4. ಮನಸ್ಸಿನ ಭಾವನೆ, ಆಲೋಚನೆ ಮತ್ತು ಅಭಿಪ್ರಾಯಗಳನ್ನು ಅರ್ಥಪೂರ್ಣವಾಗಿ ಸುಸಂಬದ್ಧವಾಗಿ ಶಾಬ್ದಿಕವಾಗಿ ಪ್ರಕಟಿಸುವುದು
20. "ವ್ಯಾಕರಣದಿಂದ ಪದಸಿದ್ಧಿ, ಪದಸಿದ್ಧಿಯಿಂದ ಅರ್ಥ, ಅರ್ಥದಿಂದ ತತ್ವಜ್ಞಾನ, ತತ್ವಜ್ಞಾನದಿಂದ ಮಾನವರು ಬಯಸುವ ಮೋಕ್ಷ ದೊರೆಯುತ್ತದೆ." ಎಂದು ವ್ಯಾಕರಣದ ಮಹತ್ವವನ್ನು ಸಾರಿದವನು
    1. ಭಟ್ಟಾಕಳಂಕ 2. ನಾಗವರ್ಮ
    3. ಕೇಶಿರಾಜ 4. ತೀ.ನಂ. ಶ್ರೀಕಂಠಯ್ಯ
21. ಭಾಷೆಯ ಕಲಿಕೆಯಲ್ಲಿ ವಾಕ್ಯ ಪದ್ಧತಿ ಎಂದರೆ
    1. ವಾಕ್ಯಗಳ ಸರಣಿ ರೂಪವನ್ನು ಅರ್ಥಮಾಡಿಸುವುದು
    2. ಸಂಭಾಷಣೆಯ ಮೂಲಕ ಸರಳವಾದ ವಾಕ್ಯಗಳನ್ನು ಬಳಸುವ ಪದ್ಧತಿ
    3. ಅರ್ಥಪೂರ್ಣ ವಾಕ್ಯಗಳನ್ನು ಮಕ್ಕಳಿಗೆ ಪರಿಚಯಿಸುತ್ತಾ ಓದು ಕಲಿಸುವುದು.
    4. ಸರಳವಾದ ಪದಗಳನ್ನು ಜೋಡಿಸುತ್ತಾ ಓದುವ ಪದ್ಧತಿ
22. ಓದುವಿಕೆ ಒಂದು ಆಲೋಚನಾ ಕ್ರಿಯೆಯಾಗಿರುತ್ತದೆ ಎಂದರೆ,
    1. ಮಾನಸಿಕ ಸಿದ್ಧತೆ, ಆಸಕ್ತಿ, ಪ್ರಚೋದನೆ, ಮಾನಸಿಕ ಏಕಾಗ್ರತೆ, ಅರ್ಥಗ್ರಹಿಕೆ, ಕಲ್ಪನೆ, ಸ್ಮರಣೆ ಮತ್ತು ಯೋಚನಾ ಕೌಶಲ ಸಮನ್ವಯಗೊಂಡಿರುತ್ತವೆ.
    2. ಮಾನಸಿಕ ಸಿದ್ಧತೆ, ದೈಹಿಕ ಸಾಮರ್ಥ್ಯ, ಆಸಕ್ತಿ, ಸಾಮರ್ಥ್ಯ ಆಧಾರಿತ ಓದುವಿಕೆ, ಯೋಚನಾಲಹರಿ ಒಳಗೊಂಡಿರುವುದು
    3. ಅರ್ಥಗ್ರಹಣ, ಕಣ್ಣಿನ ದೃಷ್ಟಿ, ಪದಬಂಧ, ಕಲಿಕೆಯಲ್ಲಿ ಆಸಕ್ತಿ, ಮನೋವೈಜ್ಞಾನಿಕ ಅಂಶಗಳ ಸಮ್ಮಿಲನಾಗಿರುವುದು
    4. ಲಿಪಿಗಳು ಯಾಂತ್ರಿಕವಾಗಿ ನೇತ್ರಗಳ ಮೂಲಕ ಪ್ರವೇಶಿಸಿ, ಸೃಜನಶೀಲತೆಯನ್ನುಂಟು ಮಾಡುವ ಮಾನಸಿಕ ಕ್ರಿಯೆಯಾಗಿದೆ.
23. "ಎಷ್ಟೆಷ್ಟೋ ಜನ ಆಪ್ತರು ಬಂದು ಈ ಕೆಲಸವನ್ನು ಖಂಡಿತವಾಗಿ ಮಾಡಬೇಡ" ಎಂದು ಅವನಿಗೆ ಹೇಳಿದರು ಆದರೆ ಅವನು ಒಬ್ಬರ ಮಾತಿಗೂ ಕಿವಿಗೊಡದೆ ತನ್ನ ದಾರಿಯನ್ನೇ ಹಿಡಿದನು. ಈ ವಾಕ್ಯವು ಯಾವುದಕ್ಕೆ ಉದಾಹರಣೆಯಾಗಿದೆ ?
    1. ಮಿಶ್ರವಾಕ್ಯ 2. ವಾಕ್ಯ ಪರಿವರ್ತನೆ
    2. ಸಾಮಾನ್ಯ ವಾಕ್ಯ 3. ಸಂಯೋಜಿತ ವಾಕ್ಯ
24. 'ಪಾಠ ಶಾಲೆ' ಎಂಬ ಪದದಲ್ಲಿ ಸೇರಿರುವ ವರ್ಣಗಳನ್ನು ಬಿಡಿಸಿ ಬರೆದಾಗ.
    1. ಪ್ - ಅ - ಠ್ - ಶ್ - ಅ - ಲ್ - ಎ

2. ಪ್ - ಆ - ರ್ - ಅ - ಶ್ - ಆ - ಲ್ - ಎ
3. ಪ್ - ಆ- ರ್ - ಆ - ಶ್ - ಅ - ಲ್ - ಎ
4. ಪ್ - ಅ - ರ್ - ಅ - ಶ್ - ಅ - ಲ್ - ಏ

25. ಈ ಕೆಳಗಿನ ತತ್ಸಮ - ತದ್ಭವ ಪದಗಳಿಗೆ ಸರಿ ಹೊಂದದಿರುವುದು
1. ಯಾತ್ರಾ - ಜಾತ್ರೆ 2. ಅಕ್ಷರ - ಅಕ್ಕರ
2. ಕ್ಷೀರ - ಕ್ಷಾರ 4. ಕರ್ತರೀ - ಕತ್ತರಿ

26. ಪರಿಣಾಮಕಾರಿ ಮತ್ತು ಯಶಸ್ವಿ ತರಗತಿ ಬೋಧನೆಗೆ ಯೋಜನೆಯ ಹಂತಗಳ ಕ್ರಮಬದ್ಧ ವಿಧಾನ
ಎ. ಬೆಳವಣಿಗೆಯ ಹಂತ
ಬಿ. ಗುರಿ ನಿರೂಪಣೆ ಹಂತ
ಸಿ. ಪೂರ್ವಸಿದ್ಧತಾ ಹಂತ
ಡಿ. ಗೃಹ ಕೆಲಸ
ಇ. ಪುನರಾವರ್ತನೆ
1. ಸಿ ಇ ಎ ಡಿ ಬಿ 2. ಸಿ ಬಿ ಇ ಎ ಡಿ
3. ಸಿ ಬಿ ಎ ಇ ಡಿ 4. ಸಿ ಎ ಬಿ ಇ ಡಿ

27. ಪದ್ಯ ಬೋಧನೆಯ ಮುಖ್ಯ ಗುರಿಗಳಲ್ಲಿ ಇದೂ ಸಹ ಒಂದು
1. ಅರ್ಥಗ್ರಹಿಕೆ ಮತ್ತು ಶಬ್ದ ಭಂಡಾರ ಹೆಚ್ಚಿಸುವುದು
2. ಅಧ್ಯಯನ ಶೀಲತೆ ಮತ್ತು ಕಲಾಭಿನಯ ಸಾಮರ್ಥ್ಯ ಬೆಳೆಸುವುದು
3. ರಸಾಸ್ವಾದನೆ ಮತ್ತು ಸೌಂದರ್ಯ ಪ್ರಜ್ಞೆ ಬೆಳೆಸುವುದು
4. ಸಾಹಿತ್ಯಾಭಿರುಚಿ ಮತ್ತು ಸೃಜನಶೀಲತೆಯನ್ನು ಬೆಳೆಸುವುದು

28. ಭಾಷಾ ಕಲಿಕೆಯ ಪ್ರಾರಂಭ ಮತ್ತು ಅದು ಬಲಗೊಳ್ಳುವುದು ಭಾಷಾ ಬೋಧನೆಯ ಈ ತತ್ವಗಳಿಮದ
1. ಅನುಕರಣತತ್ವ, ಅಭ್ಯಾಸತತ್ವ
2. ಸಿದ್ಧತಾತತ್ವ, ಅಭ್ಯಾಸತತ್ವ
3. ಸಿದ್ಧತಾತತ್ವ, ಅನುಕರಣತತ್ವ
4. ಅನುಕರಣತತ್ವ ಪುನರ್ಬಲನತತ್ವ

29. ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಆಶಯವು ಈ ರೀತಿಯಾಗಿದೆ.
1. ವಿದ್ಯಾರ್ಥಿಗಳ ಕಲಿಕೆಯ ಆಕಸ್ತಿ, ಅಭಿರುಚಿಯನ್ನು ನಿರಂತರವಾಗಿ ಅಳೆಯುವುದು
2. ಪರೀಕ್ಷೆ ಮತ್ತು ಕಿರುಪರೀಕ್ಷೆ ನಡೆಸಿ ನಿರಂತರವಾಗಿ ಮೌಲ್ಯಮಾಪನ ಮಾಡುವುದು
3. ನಿರ್ದಿಷ್ಟಪಡಿಸಿದ ಪಠ್ಯವಿಷಯದ ಮೇಲೆ ಹಂತ-ಹಂತವಾಗಿ ಪರೀಕ್ಷೆಗಳನ್ನು ನಡೆಸುವುದು
4. ವಿದ್ಯಾರ್ಥಿಗಳ ಕಲಿಕಾ ಚಟುವಟಿಕೆ, ಸಹಪಠ್ಯ ಚಟುವಟಿಕೆ ಮತ್ತು ಸಹಜ ವರ್ತನೆಗಳನ್ನು ನಿರಂತರವಾಗಿ ಗಮನಿಸುವುದು.

30. ತರಗತಿಯಲ್ಲಿ ಉದ್ಭವಿಸುವ ತಕ್ಷಣದ ಸಮಸ್ಯೆಯನ್ನು ಪರಿಹರಿಸಲು ಶಿಕ್ಷಕನು ಕೈಗೊಳ್ಳಬಹುದಾದ ಸಂಶೋಧನೆ
1. ಶೈಕ್ಷಣಿಕ ಸಂಶೋಧನೆ
2. ಪ್ರಾಯೋಗಿಕ ಸಂಶೋಧನೆ
3. ಕ್ರಿಯಾ ಸಂಶೋಧನೆ
4. ವೈಜ್ಞಾನಿಕ ಸಂಶೋಧನೆ

## Language - II
## ENGLISH

*Read the given passage and answer the questions (Q. No. 31 to Q. No. 38) that follow by selecting the most appropriate option.*

Galileo Galilee was born in the year 1564 in the town of Pisa, Italy. When he was 20 years old, he was studying in Pisa, his father wanted him to be a doctor, but Galileo was bored with schools except for Math, because Math was the one subject where he was doing well. The court mathematician offered to totor him privately. So he could become a qualified mathematician. His father was disappointed, but he agreed.

Because he needed to earn money, Galileo began experimenting with different things, trying to come up with some sort of invention that he could sell for money. He had a little bit success with his invention that was like a compass that could be used to measure plots of land. He had already experimented with pendulums, thermometer and magnets.

When he heard that a Dutch inventor had invented something called a Spyglass, but he was keeping it a secret, Galileo decided to work on his own. Within 24 hours, he had invented a telescope that could magnify things to make them appear ten times larger than real life.

